# ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

ಆಗಸ್ಟ್ 2014
ಬೆಲೆ ರೂ. 1




## ಸ್ಫೂರ್ತಿದಾಯಕ ಸ್ವಾತಂತ್ರ್ಯೋತ್ಸವ

### ರಾಷ್ಟ್ರದ ಸಂಸ್ಕೃತಿ ಜನರ ಹೃದಯದಲ್ಲಿ

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 24 ಸಂಚಿಕೆ 11
ಆಗಸ್ಟ್ 2014, ಬೆಲೆ ರೂ. 1

**ಅಭಿಮತ ಸಂಪಾದಕ ಮಂಡಳಿ**

ಬಾಲಕೃಷ್ಣ ನಾಯ್ಕ್ ಡಿ.
ಸವಿತಾ ಇನಾಮದಾರ್
ಪ್ರಕಾಶ್ ಶೆಟ್ಟಿ ಉಳೆಪಾಡಿ
ಆಶಾಲತಾ ಎಂ.

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

ಅಧ್ಯಕ್ಷ
ವಸಂತ ಶೆಟ್ಟಿ ಬೆಳ್ಳಾರೆ:
9958697823

ಉಪಾಧ್ಯಕ್ಷರು
ಬಸವರಾಜು ಬಿ.ಕೆ.:
9810391608
ಆಶಾಲತಾ ಎಂ.:
9891249149

ಪ್ರಧಾನ ಕಾರ್ಯದರ್ಶಿ
ಸಿ.ಎಂ.ನಾಗರಾಜ:
9811325440

ಕೋಶಾಧಿಕಾರಿ
ಡಾ. ಅವನೀಂದ್ರನಾಥ್ ರಾವ್
9868123382

ಜಂಟಿ ಕಾರ್ಯದರ್ಶಿಗಳು
ಎಸ್.ಸಿ. ಹೇಮಲತ:
9971121636
ಟಿ.ಎಂ. ಮೈಲಾರಪ್ಪ:
9868347461

ಸಮಿತಿ ಸದಸ್ಯರು
ಆಂಜನಿ ಗೌಡ:
9811165354
ರಾಧಾಕೃಷ್ಣ:
9818252183
ಪೂರ್ಣಿಮಾ ಗೌಡ:
8860916899
ವಿ.ವಿ.ಬಿರಾದಾರ:
9873005409
ಪಿ.ಸಿ.ಶ್ರೀನಿವಾಸ್:
9868170790
ಆನಂದ ಮುರಗೋಡ:
9312931233
ಆಶಾ ಶ್ಯಾಮಸುಂದರ್:
9871256177
ಬಸವರಾಜ ಮೇಟಿ:
9810282951
ಟಿ.ಪಿ. ಬೆಳ್ಳಿಯಪ್ಪ:
9654555795
ಕುಸುಮಾ ಪಿ. ನಂದರಗಿ
9868393955

ವಿಶೇಷ ಆಹ್ವಾನಿತರು
ಐ. ರಾಮ ಮೋಹನ್ ರಾವ್
ಡಾ. ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ
ಅರವಿಂದ ಕೌಜಲಗಿ

## ನೇರ ಮಾತು

ಡಾ. ಪುರುಷೋತ್ತಮ ಬಿಳಿಮಲೆಯವರ ಸಂಪಾದಕತ್ವದಲ್ಲಿ 'ರಾಜಧಾನಿಯಲ್ಲಿ ಕರ್ನಾಟಕ' ಎನ್ನುವ ಕೃತಿಯೊಂದನ್ನು 2006ರಲ್ಲಿ ದೆಹಲಿ ಕರ್ನಾಟಕ ಸಂಘವು ಪ್ರಕಟಿಸಿತ್ತು. ರಾಜಧಾನಿಯಲ್ಲಿ ಕರ್ನಾಟಕದ ಅಸ್ತಿತ್ವದ ಸ್ವರೂಪವನ್ನು ಕುರಿತು ಚರ್ಚಿಸುವ ಬರಹಗಳು ಈ ಪುಸ್ತಕದಲ್ಲಿವೆ. (ಈ ಕೃತಿ ಸಂಘದಲ್ಲಿ ಲಭ್ಯವಿದ್ದು ತಾವು ಕೊಂಡು ಓದಬಹುದು) ಡಾ. ಬಿಳಿಮಲೆಯವರು "ರಾಜಧಾನಿಯಲ್ಲಿ ಕರ್ನಾಟಕದ ಧ್ವನಿ ದುರ್ಬಲವಾಗಿದೆ. ಅದು ಸಶಕ್ತವಾಗಲು ಕನಿಷ್ಠ ಪಕ್ಷ ರಾಜ್ಯವನ್ನು ರಾಜಧಾನಿಯಲ್ಲಿ ಪರಿಣಾಮಕಾರಿಯಾಗಿ ಮಂಡಿಸುವ, ಅದರ ಹಿತಕ್ಕಾಗಿ ಹೋರಾಡುವ ಜನಪ್ರತಿನಿಧಿಗಳನ್ನು ಆರಿಸಿ ಕಳಿಸುವ ಕೆಲಸವನ್ನು ಕನ್ನಡಿಗರು ಮಾಡಬೇಕು" ಎನ್ನುತ್ತಾರೆ. ಇನ್ನೊಂದೆಡೆ ಸುಪ್ರೀಂಕೋರ್ಟಿನ ಹಿರಿಯ ನ್ಯಾಯವಾದಿ ಶ್ರೀ ಕೆ.ಎನ್. ಭಟ್ "ಕಾವೇರಿ ನದಿ ನೀರಿನ ವಿಷಯದಲ್ಲಿ ಕರ್ನಾಟಕ ಸರಕಾರವು ಅತ್ಯಂತ ಹೆಚ್ಚು ಹಣ ಖರ್ಚು ಮಾಡಿದೆ. ಈ ಖರ್ಚು ಎಷ್ಟಾಗಿದೆ ಎಂದರೆ ಕಾವೇರಿ ನದಿ ನೀರಿನ ಬದಲು ಅಷ್ಟು ಹಣದಿಂದ ಬಿಸ್ಲೇರಿ ಖರೀದಿಸಿ ತಮಿಳುನಾಡಿನ ರೈತರಿಗೆ ನೀಡಿದ್ದರೆ ಅವರು ತಮ್ಮ ಹಠದಿಂದ ಹಿಂದೆ ಸರಿಯುತ್ತಿದ್ದರೋ ಏನೋ" ಎಂದು ಬರೆಯುತ್ತಾರೆ. ಕರ್ನಾಟಕದ ನೆಲ, ಜಲ, ಭಾಷೆಗಳ ಬಗ್ಗೆ ದೆಹಲಿ ಕನ್ನಡಿಗರು, ಕನ್ನಡ ಸಂಘ ಸಂಸ್ಥೆಗಳು ರಾಜಧಾನಿಯಲ್ಲಿದ್ದುಕೊಂಡು ನಾವು ಏನು ಮಾಡಲು ಸಾಧ್ಯ ಎಂದು ಚಿಂತಿಸುವುದು ಅತೀ ಅಗತ್ಯ.

ಈ ನಿಟ್ಟಿನಲ್ಲಿ ದೆಹಲಿ ಕರ್ನಾಟಕ ಸಂಘವು ಇತ್ತೀಚೆಗೆ ಬೆಳಗಾವಿ ಘಟನೆಗೆ ಸಂಬಂಧಿಸಿದಂತೆ ಗೃಹ ಸಚಿವ ಶ್ರೀ ರಾಜನಾಥ್ ಸಿಂಗ್ ಅವರನ್ನು ಭೇಟಿಯಾಗಿ ಮಹಾಜನ ವರದಿಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವಂತೆ ಮನವಿ ಸಲ್ಲಿಸಿದೆ. ನಮ್ಮ ಧ್ವನಿ ಮಾಧ್ಯಮಗಳಲ್ಲಿ ಸುದ್ದಿಯಾಗಿದೆ. ಈ ಸುದ್ದಿಯ ಹಿಂದೆ ನಮ್ಮ ಸಂಸದರು ಒಗ್ಗಟ್ಟಾಗಿ ಸಂಸತ್ತಿನ ಒಳಗೆ ಮತ್ತು ಹೊರಗೆ ಕೆಲಸ ಮಾಡಿದರೆ, ಕೇಂದ್ರದ ಮೇಲೆ ರಾಜಕೀಯ ಒತ್ತಡ ಬೀರಿದರೆ ನಮ್ಮ ಧ್ವನಿಗೊಂದು ಅರ್ಥ ಬರುವುದು.

ನಮ್ಮ ಕಾರ್ಯಾವಧಿಯ ಒಂದು ವರ್ಷ ಪೂರ್ತಿಗೊಂಡು ಒಂದು ತಿಂಗಳ ಅವಧಿಯಲ್ಲಿ ವಾರ್ಷಿಕ ಮಹಾಸಭೆಯನ್ನು ಕರೆದು 'ಪ್ರಜಾಸತ್ತಾತ್ಮಕ ವ್ಯವಸ್ಥೆ'ಗೆ ಗೌರವ ನೀಡುವ ಪ್ರಯತ್ನ ಮಾಡಿದ್ದೇವೆ. ಸಂಘದ ಎಲ್ಲಾ ಕೆಲಸ ಕಾರ್ಯಗಳು ನಿಗದಿತ ಸಮಯದಲ್ಲಿ ನಡೆಯಬೇಕೆಂದು ಕಾಳಜಿ ವಹಿಸಿ ಕೆಲಸ ಮಾಡಿದ್ದೇವೆ. ಎಲ್ಲವೂ ಯಶಸ್ವಿಯಾಗಿ ನಡೆದಿದೆ ಎಂದು ನಾವು ಭಾವಿಸಿದ್ದೆಯಾದರೂ ಕೆಲವು ಕೆಲಸಗಳನ್ನು ಮಾಡಲಾರದ ಕೊರಗು ನಮ್ಮಲ್ಲಿದೆ. ಮುಂದಿನ ಒಂದು ವರ್ಷದಲ್ಲಿ ಇನ್ನೂ ಉತ್ತಮ ರೀತಿಯಲ್ಲಿ ಕೆಲಸ ಮಾಡಿ ತೋರಿಸುವ ಹಂಬಲ ನಮ್ಮದು. ಇದಕ್ಕೆ ನಿಮ್ಮ ಬೆಂಬಲ ಅತೀ ಅಗತ್ಯ. ಆಗಸ್ಟ್ 17ರಂದು ಬೆಳಗ್ಗೆ 10ಗಂಟೆಗೆ ಸಂಘದ ಸಭಾಂಗಣದಲ್ಲಿ ನಡೆಯಲಿರುವ ವಾರ್ಷಿಕ ಮಹಾಸಭೆಯಲ್ಲಿ ಸಂಘದ ಸದಸ್ಯರೆಲ್ಲರೂ ಭಾಗವಹಿಸಿ ತಮಗೂ ಸಂಘದ ಜವಾಬ್ದಾರಿ ಇದೆ ಎನ್ನುವುದನ್ನು ಗೌರವಯುತವಾಗಿ ತೋರಿಸಿಕೊಡುತ್ತೀರಿ ಎನ್ನುವ ಭರವಸೆ ನನ್ನದು ಅ

***ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು***

## ಮುನ್ನೋಟ

ಆಗಸ್ಟ್ 17ರಂದು ಬೆಳಗ್ಗೆ 10ಗಂಟೆಗೆ ಸಂಘದ ವಾರ್ಷಿಕ ಮಹಾಸಭೆಯು ಕರ್ನಾಟಕ ಸಂಘದ ಸಭಾಂಗಣದಲ್ಲಿ ನಡೆಯಲಿದೆ. ತಾವೆಲ್ಲರೂ ಈ ಸಭೆಯಲ್ಲಿ ಭಾಗವಹಿಸಬೇಕೆಂದು ಈ ಮೂಲಕ ವಿನಂತಿಸಿಕೊಳ್ಳುತ್ತಿದ್ದೇನೆ.

ಮಾನ್ಯಕೇಂದ್ರ ಮಂತ್ರಿಗಳು ಹಾಗೂ ಹೊಸದಾಗಿ ಆಯ್ಕೆಯಾಗಿರುವ ಲೋಕಸಭಾ ಮತ್ತು ರಾಜ್ಯಸಭಾ ಸದಸ್ಯರುಗಳಿಗೆ ದೆಹಲಿ ಕರ್ನಾಟಕ ಸಂಘವು ಅಭಿನಂದನೆಯನ್ನು ಸಲ್ಲಿಸಿದೆ. ಇದೇ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಾದ ಶ್ರೀ ವೆಂಕಯ್ಯ ನಾಯ್ಡು ಹಾಗೂ ಮಾನ್ಯ ಶ್ರೀ ಅನಂತಕುಮಾರ್ ಅವರಿಗೆ ದೆಹಲಿ ಕರ್ನಾಟಕ ಸಂಘದ ಪಕ್ಕದಲ್ಲಿರುವ ಮೆಟ್ರೋ ಸ್ಟೇಷನ್‌ಗೆ ದೆಹಲಿ ಕರ್ನಾಟಕ ಸಂಘದ ಹೆಸರಿಡಲು ಮತ್ತು ಸಂಘದ ಹಿಂಭಾಗದಲ್ಲಿರುವ ರಸ್ತೆಯನ್ನು ತೆರವು ಮಾಡಿಕೊಡಬೇಕೆಂದು ಮನವಿ ಸಲ್ಲಿಸಿದ್ದೇವೆ. ಇದನ್ನು ಅವರು ಕಾರ್ಯಗತಗೊಳಿಸುತ್ತಾರೆ ಎಂಬ ಭರವಸೆಯನ್ನು ಕೂಡಾ ನೀಡಿದ್ದಾರೆ.

ಆಗಸ್ಟ್ 15ರಂದು ಬೆಳಿಗ್ಗೆ 8ಕ್ಕೆ ಸ್ವಾತಂತ್ರ್ಯೋತ್ಸವದ ಅಂಗವಾಗಿ ಧ್ವಜಾರೋಹಣ, ಮಧ್ಯಾಹ್ನ 3.00ಗಂಟೆಗೆ ಎರಡು ಕನ್ನಡ ಚಲನಚಿತ್ರಗಳ ಪ್ರದರ್ಶನ, ಆಗಸ್ಟ್ 29, 30 ಮತ್ತು 31ರಂದು ಗಣೇಶ ಸಾಂಸ್ಕೃತಿಕ ಉತ್ಸವ, ಆಗಸ್ಟ್ 31ರಂದು ಸಾಹಿತ್ಯ ವೈವಿಧ್ಯ ಕಾರ್ಯಕ್ರಮ ಸಂಘದಲ್ಲಿ ನಡೆಯಲಿವೆ. ಸೆಪ್ಟೆಂಬರ್ ತಿಂಗಳಲ್ಲಿ ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿ, ಅಕ್ಟೋಬರ್ ತಿಂಗಳಲ್ಲಿ ವಾರ್ಷಿಕ ಆಟೋಟ ಸ್ಪರ್ಧೆಗಳು ಜೆ.ಎನ್.ಯು.ವಿನ ಹಳೇ ಕ್ಯಾಂಪಸ್ ಕ್ರೀಡಾಂಗಣದಲ್ಲಿ ನಡೆಯಲಿದೆ ಎಲ್ಲರೂ ಇದರಲ್ಲಿ ಪಾಲ್ಗೊಳ್ಳಬೇಕಾಗಿ ಕೇಳಿಕೊಳ್ಳುತ್ತೇನೆ. ಅ

***ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ***

**DELHI KARNATAKA SANGHA** Rao Tularam Marg, Sector-12, R K Puram, New Delhi-110022.
Phone: 011-26109615. 011-26104818 email:dksangha@gmail.com
**www.delhikarnatakasangha.com**

ದೆಹಲಿ ಕರ್ನಾಟಕ ಸಂಘದಲ್ಲಿ

# ತಿಂಗಳ ಕಾರ್ಯಕ್ರಮ

**15 ಆಗಸ್ಟ್ 2014 ಶುಕ್ರವಾರ ಬೆಳಿಗ್ಗೆ : 8.00 ಗಂಟೆಗೆ**

**ಸ್ವಾತಂತ್ರ್ಯ ದಿನಾಚರಣೆ : ಧ್ವಜಾರೋಹಣ**

**15 ಆಗಸ್ಟ್ 2014 ಶುಕ್ರವಾರ ಸಂಜೆ : 3.00 ಗಂಟೆಗೆ**

ಕನ್ನಡ ಚಲನಚಿತ್ರ ಪ್ರದರ್ಶನಗಳು ಮತ್ತು
ನಿರ್ದೇಶಕರೊಂದಿಗೆ ಸಂವಾದ

**ಗಾಂಧಿ ಜಯಂತಿ**

**ಚಿತ್ರಕಥೆ ಮತ್ತು ನಿರ್ದೇಶನ :** ರವೀಂದ್ರನಾಥ ಸಿರಿವರ
**ನಿರ್ಮಾಪಕರು :** ಯೋಗಾನಂದ ಹೆಚ್.ಎಸ್, ಸಿದ್ದರಾಜು, ಟಿ. ಕೃಷ್ಣಪ್ಪ

**ಕಳವು**

**ನಿರ್ದೇಶನ:** ರವಿ.ಎಂ.
**ನಿರ್ಮಾಪಕರು :** ಮುರಳಿ ಗುರಪ್ಪ, ಮಂಜುಳಾ ಸೋಮಶೇಖರ್

**ಮುಖ್ಯ ಅತಿಥಿ :** ಪ್ರೊ. ಎಚ್.ಎಸ್. ಶಿವಪ್ರಕಾಶ್, ಪ್ರಸಿದ್ಧ ಕವಿ
ಸ್ಥಳ : ಸಂಘದ ಸಭಾಂಗಣ

**29, 30 ಮತ್ತು 31 ಆಗಸ್ಟ್ 2014**

**ಗಣೇಶೋತ್ಸವ : ಸಾಂಸ್ಕೃತಿಕ ಕಾರ್ಯಕ್ರಮ**

**31 ಆಗಸ್ಟ್ 2014 ಭಾನುವಾರ ಸಂಜೆ : 5.00 ಗಂಟೆಗೆ**

ಸ್ಥಳ : ದೆಹಲಿ ಕರ್ನಾಟಕ ಸಂಘದ ವಿಚಾರ ಸಂಕಿರಣ ಸಭಾ ಭವನ
**ಸಾಹಿತ್ಯ ವೈವಿಧ್ಯ : ಒಂದು ನೆನಪು–ದಿ. ಡಾ. ಜಿ.ಎ. ಬಿರಾದಾರ, ಸಂಶೋಧನೆ–ಚರಿತ್ರೆ–ಸಾಹಿತ್ಯ**

**20,21,27 ಮತ್ತು 28 ಸೆಪ್ಟೆಂಬರ್ 2014**

**ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿ, ಸ್ಥಳ : ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ ಹಳೇ ಕ್ಯಾಂಪಸ್. ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ 12.09.2014**

**2, 4 ಮತ್ತು 5 ಅಕ್ಟೋಬರ್ 2014**

**ವಾರ್ಷಿಕ ಆಟೋಟ ಸ್ಪರ್ಧೆಗಳು**
**ಸ್ಥಳ : ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ ಹಳೇ ಕ್ಯಾಂಪಸ್. ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ 12.09.2014**

## ಕಾರಂತ ಪ್ರಶಸ್ತಿಗೆ ಅರ್ಜಿ ಆಹ್ವಾನ

ದೆಹಲಿ ಕರ್ನಾಟಕ ಸಂಘವು 'ಡಾ ಕೋಟ ಶಿವರಾಮ ಕಾರಂತ ಪ್ರಶಸ್ತಿ'ಯನ್ನು ಎರಡು ವರ್ಷಗಳಿಗೊಮ್ಮೆ ನೀಡುತ್ತಿದ್ದು, 2014ರ ಸಾಲಿನ ಪ್ರಶಸ್ತಿಯನ್ನು ಕಾರಂತರ ಆಸಕ್ತಿಗಳಲ್ಲಿ ಒಂದಾದ ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆ ಮಾಡಿದ ವ್ಯಕ್ತಿ ಅಥವಾ ಸಂಸ್ಥೆಗೆ ನೀಡಲು ನಿರ್ಧರಿಸಲಾಗಿದೆ. ಪ್ರಶಸ್ತಿಯು 25,000/– ರೂಪಾಯಿ ನಗದು, ಸ್ಮರಣಿಕೆ ಮತ್ತು ಪ್ರಶಸ್ತಿ ಪತ್ರವನ್ನು ಒಳಗೊಂಡಿದೆ. ಆಸಕ್ತರು ಪ್ರಶಸ್ತಿಗೆ ಸಾಧಕರ ಹೆಸರನ್ನು ಸಂಕ್ಷಿಪ್ತ ವಿವರಗಳೊಂದಿಗೆ ದಿನಾಂಕ 31.08.2014ರ ಒಳಗಾಗಿ ಸೂಚಿಸಬಹುದು.
ವಿಳಾಸ : ಡಾ.ವೈ ಅವನೀಂದ್ರನಾಥ್ ರಾವ್, ಸಂಚಾಲಕರು, 'ಡಾ. ಕೋಟ ಶಿವರಾಮ ಕಾರಂತ ಪ್ರಶಸ್ತಿ' ಆಯ್ಕೆ ಸಮಿತಿ, ದೆಹಲಿ ಕರ್ನಾಟಕ ಸಂಘ, ರಾವ್ ತುಲಾರಾಂ ಮಾರ್ಗ, ಸೆಕ್ಟರ್–12 ಆರ್.ಕೆ.ಪುರಂ. ನವದೆಹಲಿ–110 022

**ವೈದ್ಯಕೀಯ ಸಲಹೆಗಳು**

**ಡಾ. ಸಾಯಿಪ್ರಶಾಂತಿ ಶೆಟ್ಟಿ** ಅವರಿಂದ ಆಯುರ್ವೇದ ಮತ್ತು ಯೋಗ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 17 ಆಗಸ್ಟ್ 2014ರಂದು ಸಾಯಂಕಾಲ 4 ಗಂಟೆಯಿಂದ.

**ಡಾ. ಭೀಮ್ ಭಟ್** ಅವರಿಂದ ಉಚಿತ ಆಯುರ್ವೇದ ವೈದ್ಯಕೀಯ ಸಲಹೆ ಭಾನುವಾರ 31 ಆಗಸ್ಟ್ 2014 ರಂದು ಸಾಯಂಕಾಲ 4 ಗಂಟೆಯಿಂದ.

'ದೆಹಲಿ ಕರ್ನಾಟಕ ಸಂಘದ ಅಭಿಮತ' ಸಂಘದ ಸದಸ್ಯರಿಗೆ ಸಂಘದಲ್ಲಿ ನಡೆಯುತ್ತಿರುವ ಕಾರ್ಯಕ್ರಮಗಳ ಮತ್ತು ಬೆಳವಣಿಗೆಗಳ ಕುರಿತು ಮಾಹಿತಿ ನೀಡಲು ಪ್ರಕಟವಾಗುತ್ತಿದೆ. ಅಲ್ಲದೇ ಸ್ಥಳೀಯ ಬರಹಗಾರರಿಗೆ ತಮ್ಮ ಸಾಹಿತ್ಯಿಕ ರಚನೆಗಳನ್ನು ಪ್ರಕಟಿಸಲೂ ಒಂದು ವೇದಿಕೆಯಾಗಿದೆ. ಅಭಿಮತದ ಕುರಿತಾದ ನಿಮ್ಮ ಸಲಹೆಗಳಿಗೆ ಸ್ವಾಗತ. ನಿಮ್ಮ ಬರಹಗಳನ್ನು ದೆಹಲಿ ಕರ್ನಾಟಕ ಸಂಘಕ್ಕೆ ಇಮೇಲ್ ಮೂಲಕ ಕಳುಹಿಸಬಹುದು.
**(dksangha@gmail.com)**
ಓದುಗರ ಪತ್ರಗಳನ್ನೂ ಇದೇ ಇಮೇಲ್ ವಿಳಾಸಕ್ಕೆ ಕಳುಹಿಸಿಕೊಡಬಹುದು. ಅ

*ಸಂಪಾದಕ ಮಂಡಳಿ*



**ದೆಹಲಿ ಕರ್ನಾಟಕ ಸಂಘವು 2006ರಲ್ಲಿ ಡಾ. ಪುರುಷೋತ್ತಮ ಬಿಳಿಮಲೆ ಅವರ ಸಂಪಾದಕತ್ವದಲ್ಲಿ ಪ್ರಕಟಿಸಿದ ಈ ಕೃತಿ ಸಂಘದಲ್ಲಿ ಲಭ್ಯವಿದೆ. ತಾವು ಕೊಂಡು ಓದಬೇಕಾಗಿ ವಿನಂತಿ.**

ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ. ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ. ಫೋನ್ : 8860848585 – 011–26109615, 011–26104818

# ಸಂಘದ ನಿಯೋಗದಿಂದ ಕೇಂದ್ರ ಗೃಹ ಸಚಿವರಿಗೆ ಮನವಿ

ಕರ್ನಾಟಕದ ಬೆಳಗಾವಿ ತಾಲೂಕಿನ ಯಳ್ಳೂರು ಗ್ರಾಮದ ನಾಮಫಲಕದಲ್ಲಿ ಆ ಗ್ರಾಮವು ಮಹಾರಾಷ್ಟ್ರದ ಭಾಗಕ್ಕೆ ಸೇರಿದ್ದು ಎಂದು ಸೂಚಿಸಿರುವುದನ್ನು ಬೆಳಗಾವಿ ಪೋಲಿಸರು ಕಿತ್ತು ಹಾಕಿದ ನಂತರ ನಡೆದ ಗಲಭೆ ಹಾಗೂ ಬೆದರಿಕೆಗಳ ಹಿನ್ನಲೆಯಲ್ಲಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರ ನೇತೃತ್ವದಲ್ಲಿ ನಿಯೋಗವೊಂದು ಕೇಂದ್ರ ಸರಕಾರದ ಗೃಹಮಂತ್ರಿ ಶ್ರೀ ರಾಜನಾಥ ಸಿಂಗ್ ಅವರನ್ನು ಜುಲೈ 30ರಂದು ನವದೆಹಲಿಯಲ್ಲಿ ಭೇಟಿಯಾಗಿ ಬೆಳಗಾವಿ ಮತ್ತು ಕರ್ನಾಟಕ ಮಾತ್ರವಲ್ಲ ದೇಶದ ಯಾವುದೇ ಭಾಗದಲ್ಲಿ ಭಾಷೆ ಮತ್ತು ಪ್ರದೇಶದ ಹೆಸರಿನಲ್ಲಿ ಹಿಂಸೆಯನ್ನು ಪ್ರಚೋದಿಸದಂತೆ ಮತ್ತು ಶಾಂತಿ ನೆಲೆಗೊಳ್ಳುವಂತೆ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿತು.

ನಿಯೋಗದಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ, ಕೋಶಾಧಿಕಾರಿ ಡಾ. ವೈ. ಅವನೀಂದ್ರನಾಥ್ ರಾವ್, ಜಂಟಿ ಕಾರ್ಯದರ್ಶಿ ಶ್ರೀಮತಿ ಹೇಮಲತ, ಹಾಗೂ ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ಆಶಾ ಶ್ಯಾಮಸುಂದರ್ ಅವರಿದ್ದರು. ಅ

***ಅಭಿಮತ ವರದಿ***



# ಸಂಘದ ವತಿಯಿಂದ ಎಚ್.ಎಸ್. ದೊರೆಸ್ವಾಮಿ ಅವರಿಗೆ ಗೌರವಾರ್ಪಣೆ



ಭಾರತದ ಮಾಜಿ ಪ್ರಧಾನಮಂತ್ರಿ ಶ್ರೀಮತಿ ಇಂದಿರಾ ಗಾಂಧಿಯವರ ವಾರ್ತಾ ಸಲಹೆಗಾರರಾಗಿದ್ದು ದೆಹಲಿ ಕರ್ನಾಟಕ ಸಂಘದ ಸದಸ್ಯರಾಗಿದ್ದ ಶ್ರೀ ಎಚ್.ವೈ. ಶಾರದಾ ಪ್ರಸಾದ್ ಅವರು ಇಂಗ್ಲೀಷ್‌ಗೆ ಭಾಷಾಂತರಿಸಿದ 'ಜರ್ನಿ ಟು ವಾರ್ಧಾ' ಪುಸ್ತಕದ ಲೋಕಾರ್ಪಣೆ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಸ್ವಾತಂತ್ರ್ಯ ಹೋರಾಟಗಾರ ಶ್ರೀ ಎಚ್.ಎಸ್. ದೊರೆಸ್ವಾಮಿ ಅವರನ್ನು ಆಗಮಿಸುವಂತೆ ಸಂಘದ ವತಿಯಿಂದ ಕೋರಲಾಯಿತು.ಬೆಂಗಳೂರಿನ ಜಯನಗರದ ನಾಲ್ಕನೇ ಬ್ಲಾಕಿನಲ್ಲಿರುವ ಶ್ರೀ ದೊರೆಸ್ವಾಮಿ ಅವರ ಮನೆಗೆ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಮಾಜಿ ಉಪಾಧ್ಯಕ್ಷೆ, 'ಅಭಿಮತ' ಮುಖಪತ್ರಿಕೆಯ ಸಂಪಾದಕರಾಗಿದ್ದು, ಹಾಲಿ ಬೆಂಗಳೂರಲ್ಲಿ ನೆಲೆಸಿರುವ ಶ್ರೀಮತಿ ಉಷಾ ಭರತಾದ್ರಿ ಹಾಗೂ ಆಜೀವ ಸದಸ್ಯರಾಗಿರುವ ಶ್ರೀ ಮೋಹನ್ ಕೊಂಡಜ್ಜಿ ಅವರು ಜುಲೈ 12ರಂದು ಭೇಟಿಯಾಗಿ ಸಂಘದ ಕಾರ್ಯಕ್ರಮಗಳ ಬಗ್ಗೆ ವಿವರಿಸಿದರು.

ಭಾರತದ ಇತಿಹಾಸದ ಪುಟಗಳಲ್ಲಿ ಬಹುಮುಖ್ಯ ಭಾಗವಾದ ಮಹಾತ್ಮಾ ಗಾಂಧೀಜಿಯವರ ಕಾಲವನ್ನು ಕುರಿತು ದಿವಂಗತ ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮ ಅವರು ಕನ್ನಡದಲ್ಲಿ ಬರೆದ 'ವಾರ್ಧಾ ಯಾತ್ರೆ' ಪುಸ್ತಕವನ್ನು ಶ್ರೀ ಶಾರದಾ ಪ್ರಸಾದರು ಆಂಗ್ಲ ಭಾಷೆಗೆ ಭಾಷಾಂತರಿಸಿದ್ದಾರೆ.

ಶ್ರೀ ಶಾರದಾ ಪ್ರಸಾದರ ಮರಣಾನಂತರ ಅವರ ಪತ್ನಿ ಶ್ರೀಮತಿ ಕಮಲಮ್ಮ ಅವರ ಆಶಯದಂತೆ ಶ್ರೀ ಐ. ರಾಮಮೋಹನ ರಾಯರ ಸಹಾಯಹಸ್ತದೊಂದಿಗೆ ಈ ಕೃತಿಯನ್ನು ದೆಹಲಿ ಕರ್ನಾಟಕ ಸಂಘವು ಪ್ರಕಟಿಸುತ್ತಿರುವ ವಿಷಯವನ್ನು ಶ್ರೀ ದೊರೆಸ್ವಾಮಿ ಅವರಿಗೆ ತಿಳಿಸಲಾಯಿತು.

ಶತಾಯುಷ್ಯದ ಹೊಸ್ತಿಲಲ್ಲಿರುವ 96 ವರ್ಷದ ಹಿರಿಯ ಉತ್ಸಾಹೀಜೀವಿ ಶ್ರೀ ಎಚ್.ಎಸ್. ದೊರೆಸ್ವಾಮಿ ಅವರಿಗೆ ಅಭಿಮಾನ ಪೂರ್ವಕವಾಗಿ ಫಲಬುಟ್ಟಿ ಹಾಗೂ ಪುಷ್ಪಗುಚ್ಛಗಳೊಂದಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಗೌರವಿಸಲಾಯಿತು. ಅ

***ರಮೇಶ್ ಟಿ.ಎಸ್.***

# ಹಾರ್ದಿಕ ವಿದಾಯ



**ಅರುಣ್ ಬಡಿಗೇರ್** : ದೆಹಲಿಯಲ್ಲಿ ಖಾಸಗಿ ಕನ್ನಡ ನ್ಯೂಸ್ ಚಾನೆಲ್‌ನಲ್ಲಿ ಕೆಲಸ ಮಾಡುತ್ತಿದ್ದ ಶ್ರೀ ಅರುಣ್ ಬಡಿಗೇರ್ ಅವರು ಬೆಂಗಳೂರಿಗೆ ವರ್ಗವಾಗಿ ತೆರಳುತ್ತಿರುವ ಸಂದರ್ಭದಲ್ಲಿ ಅವರನ್ನು ದೆಹಲಿ ಕರ್ನಾಟಕ ಸಂಘದ ವತಿಯಿಂದ ಆತ್ಮೀಯವಾಗಿ ಬೀಳ್ಕೊಡಲಾಯಿತು. ಕೇಂದ್ರ ವಿಮಾನ ಯಾನ ಖಾತೆ ಸಚಿವ ಶ್ರೀ ಜಿ.ಎಂ. ಸಿದ್ದೇಶ್ ಅವರು ಸಂಘದ ಸ್ಮರಣಿಕೆಯಿತ್ತು ಗೌರವಿಸಿದರು.



**ಮಿಥುನ್ ಶೆಟ್ಟಿ** : ಕರ್ನಾಟಕ ಭವನದಲ್ಲಿ ಸಹಾಯಕ ಅಭಿಯಂತರಾಗಿದ್ದ ಶ್ರೀ ಮಿಥುನ್ ಶೆಟ್ಟಿ ಅವರು ದೆಹಲಿಯಿಂದ ವರ್ಗಾವಣೆಗೊಂಡು ಕರ್ನಾಟಕಕ್ಕೆ ಮರಳುತ್ತಿರುವ ಸಂದರ್ಭದಲ್ಲಿ ಅವರನ್ನು ದೆಹಲಿ ಕರ್ನಾಟಕ ಸಂಘದ ವತಿಯಿಂದ ಆತ್ಮೀಯವಾಗಿ ಬೀಳ್ಕೊಡಲಾಯಿತು. ಅವರನ್ನು ಲೋಕಸಭಾ ಸದಸ್ಯ ಶ್ರೀ ಪ್ರಹ್ಲಾದ ಜೋಷಿ ಅವರು ಸನ್ಮಾನಿಸಿದರು. ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಶ್ರೀ ಮಿಥುನ್ ಶೆಟ್ಟಿ ಅವರು ಸಂಘದ ವಿವಿಧ ಕಾಮಗಾರಿ ಕಾರ್ಯಗಳಲ್ಲಿ ತಮ್ಮ ವೈಯಕ್ತಿಕ ನೆಲೆಯಲ್ಲಿ ಔದಾರ್ಯದಿಂದ ಸಲಹೆ ಸೂಚನೆಗಳನ್ನು ನೀಡುತ್ತಿದ್ದುದನ್ನು ಸ್ಮರಿಸಿದರು. ಅ

***ಅಭಿಮತ ವರದಿ***

# ಸಂಘದಲ್ಲಿ ಸಾಹಿತ್ಯ ವೈವಿಧ್ಯ: ಶಿಕ್ಷಣದಲ್ಲಿ ಭಾಷೆ - ಮುಂದುವರಿದ ಚರ್ಚೆ

ಕನ್ನಡ ಮಾಧ್ಯಮ ಸರಕಾರಿ ಶಾಲೆಗಳನ್ನು ಅಭಿವೃದ್ಧಿಪಡಿಸಿ, ಅವು ಖಾಸಗಿ ಇಂಗ್ಲೀಷ್ ಶಾಲೆಗಳಿಗಿಂತ ಹೆಚ್ಚಿನ ಉತ್ತಮ ಗುಣಮಟ್ಟದ ವಿದ್ಯಾಭ್ಯಾಸವನ್ನು ನೀಡುವಂತಾಗಬೇಕು. ಅಂತಹ ಶಾಲೆಗಳಲ್ಲಿ ಪರಿಣಿತ ಅಧ್ಯಾಪಕರ ನೇಮಕ ಮತ್ತು ಉತ್ತಮ ಸವಲತ್ತುಗಳನ್ನು ಒದಗಿಸುವುದರ ಮೂಲಕ ವಿದ್ಯಾರ್ಥಿಗಳು ಕನ್ನಡ ಮಾಧ್ಯಮದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪಡೆಯಲು ಪ್ರೋತ್ಸಾಹ ದೊರಕಬೇಕು ಎಂದು ದೆಹಲಿಯ ಕನ್ನಡಿಗರು ಅಭಿಪ್ರಾಯಪಟ್ಟರು.

ಕನ್ನಡ ಶಿಕ್ಷಣ ಪದ್ಧತಿ, ಭಾಷೆ, ಸಂಸ್ಕೃತಿ ಹಾಗೂ ಶಿಕ್ಷಣ ಮಾಧ್ಯಮ ವಿಷಯದ ಕುರಿತು ದೆಹಲಿ ಕರ್ನಾಟಕ ಸಂಘದಲ್ಲಿ ಇದೇ ಜುಲೈ 20ರಂದು ನಡೆದ ಚರ್ಚೆಯಲ್ಲಿ ಭಾಗವಹಿಸಿದ ಬಹಳಷ್ಟು ಮಂದಿ ಈ ಅಭಿಪ್ರಾಯಪಟ್ಟರು.

ಶಾಲೆ, ಕಾಲೇಜುಗಳಲ್ಲಿ ಕನ್ನಡ ಭಾಷಾ ಮಾಧ್ಯಮ ಹಿಂದಕ್ಕೆ ಸರಿದಿದ್ದು ಎಲ್ಲವೂ ಇಂಗ್ಲಿಷ್‌ಮಯವಾಗುತ್ತಿದೆ; ಕೊನೆಯ ಪಕ್ಷ ಒಂದನೇ ತರಗತಿಯಿಂದ ಐದನೇ ತರಗತಿಯವರೆಗೆ ಕರ್ನಾಟಕದ ಎಲ್ಲಾ ಶಾಲೆಗಳಲ್ಲಿ ಕನ್ನಡ ಮಾಧ್ಯಮದಲ್ಲಿ ಪಠ್ಯ ಕ್ರಮ ನಡೆಸಬೇಕು ಮತ್ತು ಕನ್ನಡದಲ್ಲಿ ಅಧ್ಯಯನ ಮಾಡುವವರಿಗೆ ವಿಶೇಷ ಸವಲತ್ತುಗಳನ್ನು ನೀಡಿ ಕನ್ನಡ ಭಾಷೆಗೆ ಪ್ರಾಶಸ್ತ್ಯ, ಪ್ರಾಮುಖ್ಯತೆ ನೀಡಬೇಕು ಎಂದು ಒತ್ತಾಯಿಸಲಾಯಿತು. ಕನ್ನಡ ಭಾಷೆ, ಸಂಸ್ಕೃತಿ, ಸಾಹಿತ್ಯವನ್ನು ಬಿಂಬಿಸುವಂತಹ ಶೈಕ್ಷಣಿಕ ಹಾಗೂ ವಿಶೇಷ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸಿಕೊಂಡು ಬರಬೇಕು ಎಂದು ಸಭೆಯಲ್ಲಿ ಮಾತಾಡಿದವರು ಒತ್ತಾಯಿಸಿದರು.

ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಚರ್ಚಾ ಸಭೆಯಲ್ಲಿ ಶ್ರೀ ಸಖಾರಾಮ ಉಪ್ಪೂರು, ಶ್ರೀ ಸಿ.ಎಂ. ಅಂಗಡಿ, ಡಾ. ಅಹಲ್ಯಾ ಚಿಂತಾಮಣಿ, ಶ್ರೀಮತಿ ನಂದಿನಿ ಮಲ್ಯ, ಕು. ಮಾಲಾ ಹೊನ್ನತ್ತಿ, ಶ್ರೀ ಚೆನ್ನು ಎಸ್. ಮಠದ, ಶ್ರೀ ಜಮಖಂಡಿ, ಶ್ರೀ ಕೆ.ಟಿ. ಗಣೇಶ್, ಶ್ರೀ ಟಿ.ಪಿ. ಬೆಳ್ಳಿಯಪ್ಪ, ಶ್ರೀ ಶಿವಾನಂದ ಇಂಗಳೇಶ್ವರ, ಶ್ರೀ ನರಸಿಂಹಮೂರ್ತಿ, ಶ್ರೀ ಎನ್.ಎ. ಮಾಧವ, ಶ್ರೀ ಪ್ರದೀಪ್ ಕುಮಾರ್ ಮೊದಲಾದವರು ಮಾತಾಡಿದರು. ಕಳೆದ ಮೂರು ತಿಂಗಳುಗಳಿಂದ ತಿಂಗಳಿಗೊಂದರಂತೆ ನಡೆದ ಈ ಚರ್ಚಾಕಾರ್ಯಕ್ರಮದಲ್ಲಿ ಸುಮಾರು 250 ಮಂದಿ ಕನ್ನಡಿಗರು ಭಾಗವಹಿಸಿದ್ದರು. ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯ ಮತ್ತು ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಶಿಕ್ಷಣ ಸಂಸ್ಥೆಗಳಲ್ಲಿ ಸ್ನಾತಕೋತ್ತರ ಮತ್ತು ಡಾಕ್ಟರೇಟ್ ಅಧ್ಯಯನ ನಡೆಸುತ್ತಿರುವ ಕರ್ನಾಟಕದ ವಿದ್ಯಾರ್ಥಿಗಳು, ದೆಹಲಿ ಕನ್ನಡ ಶಾಲೆಯ ಪ್ರಾಂಶುಪಾಲ ಮತ್ತು ಅಧ್ಯಾಪಕ ವೃಂದ, ಸರ್ವೋಚ್ಚ ನ್ಯಾಯಾಲಯದ ಕನ್ನಡ ಮೂಲದ ವಕೀಲರುಗಳು, ಡಾಕ್ಟರುಗಳು, ನಿವೃತ್ತ ಅಧಿಕಾರಿಗಳು, ಸಾಮಾನ್ಯ ವರ್ಗದ ಕನ್ನಡ ಮಹಿಳೆಯರು ಮತ್ತು ಯುವಕರು ಈ ಚರ್ಚೆಯಲ್ಲಿ ಭಾಗವಹಿಸಿದ್ದರು.

ದೇಶದ ಸರ್ವೋಚ್ಚ ನ್ಯಾಯಾಲಯದ ಇತ್ತೀಚಿನ ಶಿಕ್ಷಣ ಮಾಧ್ಯಮದ ಕುರಿತಾದ ತೀರ್ಮಾನದ ಪರಿಣಾಮ ಮತ್ತು ಕನ್ನಡ ಮಾಧ್ಯಮ ಶಾಲೆಗಳು ಮುಚ್ಚುತ್ತಿರುವ ಅನಿವಾರ್ಯತೆಯ ಕುರಿತು ಗಂಭೀರವಾದ ಚಿಂತನೆಯೊಂದಿಗೆ ಸಮರ್ಪಕವಾದ ಕಾರ್ಯಯೋಜನೆಗಳನ್ನು ಅಳವಡಿಸಿ ಭಾಷೆಯನ್ನು ಉಳಿಸಿ ಬೆಳೆಸುವ ಕಾರ್ಯವಾಗಬೇಕು ಎಂದು ಸಭೆಯಲ್ಲಿ ಚರ್ಚಿಸಲಾಯಿತು.

ಕುವೆಂಪು, ದ.ರಾ.ಬೇಂದ್ರೆ, ಮಾಸ್ತಿ, ಪು.ತಿ.ನ., ನಿಸಾರ್ ಅಹಮದ್, ಜಿ.ಪಿ. ರಾಜರತ್ನಂ ಅವರಂತಹ ಮಹತ್ವದ ಹಿರಿಯ ಸಾಹಿತಿಗಳು ದುಡಿದು ಬೆಳೆಸಿದ ಕನ್ನಡ ಭಾಷೆಯ ಸಾಹಿತ್ಯಕ್ಕೆ ಈಗ ಹೆಚ್ಚಿನ ಗಮನವಿಲ್ಲದ ಕಾರಣ ಸಾಹಿತ್ಯದ ಓದು ಕೂಡಾ ಅಧೋಗತಿಗೆ ಹೋಗುತ್ತಿದೆ. ಶತ–ಶತಮಾನಗಳಿಂದ ಹಿರಿಯರು ಹೋರಾಡಿ ಬೆಳೆಸಿದ ಕನ್ನಡ ನಾಡು–ನುಡಿ–ಸಂಸ್ಕೃತಿ ನಿಧಾನವಾಗಿ ಕ್ಷೀಣಿಸುತ್ತಾ ಹೋಗುತ್ತಿದೆ. ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು ಕುಂಟಿತಗೊಳ್ಳುತ್ತವೆ. ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ ನಶಿಸಿ ಹೋದರೆ ಕರ್ನಾಟಕವು ಕನ್ನಡ ನಾಡಾಗಿ ಉಳಿಯಲಾರದು. ಕನ್ನಡದ ಹಿರಿಯ ಸಾಹಿತಿಗಳ ಕೃತಿಗಳನ್ನು ಕನ್ನಡದಲ್ಲಿ ಓದದೇ ಅವುಗಳ ಇಂಗ್ಲಿಷ್ ಅಥವಾ ಹಿಂದಿ ಅನುವಾದಗಳನ್ನು ಓದಿ ತಿಳಿದುಕೊಳ್ಳುವಂತಹ ಕಾಲ ಬರಬಾರದು ಎಂದು ಅಭಿಪ್ರಾಯ ಪಡಲಾಯಿತು.

ಇಂದಿನ ದಿನಗಳಲ್ಲಿ ಮನೆಗಳಲ್ಲೂ ಕನ್ನಡ ಓದುವ, ಕನ್ನಡ ಸಿನೆಮಾ, ಟಿ.ವಿ. ಚಾನೆಲ್‌ಗಳನ್ನು ನೋಡುವವರ ಸಂಖ್ಯೆ ಕಡಿಮೆಯಾಗುತ್ತಾ ಹೋಗುತ್ತಿದೆ. ಹಿಂದಿ ಹಾಗೂ ಇಂಗ್ಲಿಷ್ ಚಾನೆಲ್‌ಗಳು ಕನ್ನಡ ಚಾನೆಲ್‌ಗಳನ್ನು ಹಿಂದೆ ತಳ್ಳಿವೆ. ಕನ್ನಡ ಚಾನೆಲ್‌ಗಳಲ್ಲಿ ಟಿ.ವಿ., ಸಿನೆಮಾ ಮಾಧ್ಯಮಗಳಲ್ಲಿ ಬಂಡವಾಳ ಹೂಡುವಿಕೆ ಕಡಿಮೆಯಾಗುತ್ತಾ ಹೋಗುತ್ತಿದೆ. ತಂತ್ರಜ್ಞಾನದೊಂದಿಗೆ ಹೊಸ ಮಾಧ್ಯಮಗಳು ಬೆಳೆದರೂ, ಅಂತರ್ಜಾಲದ ಸಾಮಾಜಿಕ ತಾಣಗಳಲ್ಲಿ ಕೂಡಾ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಪ್ರಸಾರ ಮತ್ತು ಬೆಳವಣಿಗೆಗೆ ಸಾಕಷ್ಟು ಮಹತ್ವ ನೀಡುತ್ತಿಲ್ಲ ಎನ್ನಲಾಯಿತು.

ಕನ್ನಡವನ್ನು ತಪ್ಪದೇ ಮನೆಗಳಲ್ಲಿ, ವ್ಯವಹಾರಗಳಲ್ಲಿ ಬಳಸಬೇಕು. ಅನಿವಾರ್ಯವಾದಾಗಷ್ಟೇ ಇತರ ಭಾಷೆಗಳ ಮೊರೆ ಹೋಗಬೇಕು. ಇಲ್ಲವೇ ದ್ವಿಭಾಷಿ ಅಥವಾ ತ್ರಿಭಾಷಿ ಪದ್ಧತಿಯನ್ನು ಅನುಸರಿಸಬೇಕು. ಕನ್ನಡವನ್ನು ಬದಿಗೊತ್ತಿ ಅನ್ಯ ಭಾಷೆಯನ್ನು ಬೆಳೆಸುವ ಚಾಳಿಯನ್ನು ತಕ್ಷಣದಿಂದಲೇ ಬಿಡಬೇಕು. ದೇಶದ ವಿವಿಧ ಪ್ರದೇಶಗಳಲ್ಲಿ ಕನ್ನಡ ಭಾಷೆಯ ಪ್ರಚಾರ, ಅಭಿವೃದ್ಧಿಗಾಗಿ ಕೆಲಸ ಮಾಡಬೇಕು. ದೇಶದ ಪ್ರಮುಖ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಪೀಠದ ಸ್ಥಾಪನೆ, ಹೊರನಾಡ ಕನ್ನಡ ಸಂಘ ಸಂಸ್ಥೆಗಳಿಗೆ ಅನುದಾನ ನೀಡಿ ಪ್ರೋತ್ಸಾಹಿಸಬೇಕು. ಕರ್ನಾಟಕದಲ್ಲಿ ಹುಟ್ಟಿ ಬೆಳೆದು ಕನ್ನಡವನ್ನೇ ನಂಬಿ ಕನ್ನಡದಲ್ಲೇ ಮಾತಾಡಿಕೊಂಡು, ಓದಿ ಬರೆಯುವ ಅಪ್ಪಟ ಕನ್ನಡಿಗರಿಗೆ ವಿಶೇಷ ಸ್ಥಾನಮಾನವನ್ನು ಎಲ್ಲಾ ರಂಗಗಳಲ್ಲೂ ನೀಡಿ ಪ್ರೋತ್ಸಾಹಿಸಬೇಕು. ಇಂಗ್ಲಿಷ್, ಹಿಂದಿ ಮಾಧ್ಯಮಗಳ ಹಾವಳಿಯನ್ನು ತಡೆಯಲು ಎಲ್ಲಾ ಸಂವಿಧಾನಾತ್ಮಕ ಮಾರ್ಗಗಳನ್ನು ಅನುಸರಿಸಬೇಕು ಎಂದು ಚರ್ಚಿಸಲಾಯಿತು. ಅ

***ಸಖಾರಾಮ ಉಪ್ಪೂರು***



# ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯಿಂದ
# ದೆಹಲಿಯಲ್ಲಿ ತುಳು ರಂಗಕ್ರಿಯಾ ಕಮ್ಮಟ

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯಿಂದ ದೆಹಲಿ ತುಳು ಸಿರಿ ಆಶ್ರಯದಲ್ಲಿ ನಡೆದ ತುಳು ರಂಗಕ್ರಿಯಾ ಕಮ್ಮಟವನ್ನು ದೆಹಲಿಯ ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾದ ಡೀನ್ ಶ್ರೀ ಸುರೇಶ್ ಶೆಟ್ಟಿ ಅವರು ದೆಹಲಿಯಲ್ಲಿ ಜುಲೈ 26ರಂದು ಉದ್ಘಾಟಿಸಿದರು. ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಸದಸ್ಯ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಮತ್ತು ದೆಹಲಿ ತುಳು ಸಿರಿಯ ಅಧ್ಯಕ್ಷ ಡಾ. ಅವನೀಂದ್ರನಾಥ್ ರಾವ್ ವೈ. ಅವರೂ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಮಾತಾಡಿದ ಶ್ರೀ ಸುರೇಶ್ ಶೆಟ್ಟಿ ಅವರು ರಂಗ ತರಬೇತಿಯು ರಂಗ ಶಿಕ್ಷಣವನ್ನು ನೀಡುವ ಸಂಸ್ಥೆಗಳಿಗೆ ಸೀಮಿತವಾಗದೇ ಅದರ ಅರಿವನ್ನು ವಿಸ್ತರಿಸಬೇಕು ಎಂದು ಅಭಿಪ್ರಾಯಪಟ್ಟರು. ರಂಗಭೂಮಿಯ ಬೆಳವಣಿಗೆಗೆ ರಂಗತಜ್ಞರು ವಿಶೇಷವಾಗಿ ವಿವಿಧೆಡೆ ಶಿಬಿರಗಳಲ್ಲಿ ಭಾಗವಹಿಸುತ್ತಾ ತಮ್ಮ ಪರಿಣತಿಯನ್ನು ಹೆಚ್ಚಿನ ಜನರಿಗೆ ಉಪಯುಕವಾಗುವಂತೆ ಮಾಡಬೇಕು ಎಂದು ಆಶಿಸಿದರು.








ಅಕಾಡೆಮಿಯ ಸದಸ್ಯ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಮಾತನಾಡಿ ಇದೇ ಮೊದಲ ಬಾರಿಗೆ ದೆಹಲಿಯಲ್ಲಿ ತುಳು ರಂಗ ಕಮ್ಮಟ ಜರುಗುತ್ತಿದೆ ಎಂದು ತಿಳಿಸಿದರು. ಅಕಾಡೆಮಿಯು ಶ್ರೀಮತಿ ಜಾನಕಿ ಬ್ರಹ್ಮಾವರ ಅವರ ಅಧ್ಯಕ್ಷತೆಯಲ್ಲಿ ತುಳು ಸಂಘಟನೆಗಳನ್ನು ಬೆಳೆಸುವ ಜೊತೆಗೆ ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಹೆಚ್ಚು ಒತ್ತು ನೀಡಿ ಕೆಲಸ ಮಾಡುತ್ತಿದೆ. ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಈಗ ಹೊಸ ಕಾರ್ಯ ಸೂಚಿಯನ್ನು ಹಾಕಿಕೊಂಡು ಅಕಾಡೆಮಿಯ ಎಲ್ಲಾ ಕೆಲಸಗಳನ್ನು ಅನುಷ್ಠಾನಗೊಳಿಸಲು ಪ್ರಯತ್ನಿಸುತ್ತಿದೆಯೆಂದರು.

ರಂಗ ಅಭಿನಯಕ್ಕೆ ಬೇಕಾದ ಮೂಲ ಕ್ರಿಯೆಗಳನ್ನು ಕೆಲವು ಪ್ರಾತ್ಯಕ್ಷಿಕೆಗಳ ಮೂಲಕ ಶ್ರೀ ಸುರೇಶ್ ಶೆಟ್ಟಿ ಅವರು ತುಳು ರಂಗಕ್ರಿಯಾ ಕಮ್ಮಟದಲ್ಲಿ ಭಾಗವಹಿಸಿದವರಿಗೆ ತೋರಿಸಿಕೊಟ್ಟರು.

ಸಾಹಿತಿ ಡಾ. ಪುರುಷೋತ್ತಮ ಬಿಳಿಮಲೆ ಅವರು ಮಾತನಾಡಿ ಶ್ರೀಮಂತವಾಗಿರುವ ತುಳು ಜಾನಪದ ಹಿನ್ನಲೆಯ ವಸ್ತುವನ್ನು ಆಧರಿಸಿದ ನಾಟಕಗಳ ಪ್ರಯೋಗ ಆಗಬೇಕು ಮತ್ತು ಈ ಮೂಲಕ ತುಳು ರಂಗಭೂಮಿ ಬೆಳೆಯಬೇಕು ಎಂದು ಆಶಿಸಿದರು. ಈಗ ತುಳು ರಂಗಭೂಮಿಗೆ ಹೊಸ ಆಯಾಮ ಬರಬೇಕಾದರೆ ಮತ್ತೆ ನಾವು ತುಳುವಿಗೆ ವಿಶಿಷ್ಟವಾಗಿರುವ ನಿರೂಪಣೆಗಳ ಕಡೆಗೆ ತೆರಳಿ ಅವನ್ನು ಮತ್ತೆ ಹೊಸದಾಗಿ ಕಟ್ಟಬೇಕು, ಎಂದರು. ಹೊಸ ವಸ್ತು ಮತ್ತು ತಂತ್ರಗಳ ಮೂಲಕ ತುಳು ರಂಗಭೂಮಿಗೆ ನಾವೀಗ ಹೊಸ ಆಯಾಮ ನೀಡಬೇಕಾಗಿದೆ ಎಂದು ಬಿಳಿಮಲೆ ಅವರು ನುಡಿದರು.

ರಂಗ ತರಬೇತಿ ಕಮ್ಮಟದ ಸಮಾರೋಪ ಸಮಾರಂಭದ ಮುಖ್ಯ ಅತಿಥಿಯಾಗಿ ಭಾಗವಹಿಸಿದ ಮಾಜಿ ರಣಜಿ ಆಟಗಾರ ಶ್ರೀ ಎಂ. ಶಿವರಾಮ ರೈ ಅವರು ಮಾನವನ ದೈಹಿಕ ಮತ್ತು ಮಾನಸಿಕ ಕ್ಷಮತೆಗೆ ರಂಗಾಸಕ್ತಿ ಸಹಕಾರಿ ಎಂಬುದಾಗಿ ಹೇಳಿದರು. ಕ್ರೀಡಾ ಅಭ್ಯಾಸಕ್ಕೂ ಮುನ್ನ ಕೆಲವೊಂದು ಮನರಂಜನಾತ್ಮಕ ಆಟಗಳನ್ನು ಆಡಿಸಲಾಗುತ್ತದೆ. ಇದರಿಂದ ಮನಸ್ಸು ಉಲ್ಲಾಸಗೊಂಡು ಕ್ರೀಡಾಳುಗಳು ಹೆಚ್ಚಿನ ಸಾಧನೆ ಮಾಡುತ್ತಾರೆ ಎಂದು ರೈ ಅವರು ಅಭಿಪ್ರಾಯಪಟ್ಟರು.

ಸಖಾರಾಮ ಉಪ್ಪೂರು, ಬಾಲಕೃಷ್ಣ ನಾಯ್ಕ್ ಡಿ, ಪ್ರಕಾಶ್ ಶೆಟ್ಟಿ ಉಳೆಪಾಡಿ, ರವೀಂದ್ರ ಎಸ್. ಬೆಳ್ಳೆ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. ಕೆ.ಆರ್. ರಾಮಮೂರ್ತಿ ಕಾರ್ಯಕ್ರಮ ನಿರೂಪಿಸಿದರು. ಅ

# ದೆಹಲಿಯಲ್ಲಿ ಜೆಎಸ್‌ಎಸ್ ಆಧ್ಯಾತ್ಮ ಮತ್ತು ಸಾಂಸ್ಕೃತಿಕ ಕೇಂದ್ರ
# ಅಬ್ದುಲ್ ಕಲಾಂರಿಂದ ಲೋಕಾರ್ಪಣೆ



ಸುತ್ತೂರು ಮಠದ ಸಂಸ್ಥೆಗಳಿಗೆ ಭೇಟಿ ನೀಡುವಾಗ ನನಗೆ ಈ ಮಠದ ಸಾವಿರಕ್ಕೂ ಹೆಚ್ಚು ವರ್ಷಗಳಲ್ಲಿ ಶೈಕ್ಷಣಿಕ, ಆಧ್ಯಾತ್ಮಿಕ ಸಂಸ್ಥೆಗಳ ಮೂಲಕ ಜ್ಞಾನ ಜ್ಯೋತಿಯನ್ನು ಉರಿಸುತ್ತಿರುವ ಪರಂಪರೆಯ ಅನುಭವ ಆಗುತ್ತದೆ ಎಂದು ಭಾರತದ ಮಾಜಿ ರಾಷ್ಟ್ರಪತಿ ಅಬ್ದುಲ್ ಕಲಾಂ ಹೇಳಿದ್ದಾರೆ.

ದೆಹಲಿಯ ಸಾಕೇತದಲ್ಲಿ ಸುತ್ತೂರು ಮಠದ ವತಿಯಿಂದ ನಿರ್ಮಿಸಲಾದ ನೂತನ ಜೆಎಸ್‌ಎಸ್ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರವನ್ನು ಜುಲೈ 28ರಂದು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಜೆಎಸ್‌ಎಸ್ ಸಂಸ್ಥೆಗಳು ಅತ್ಯುತ್ತಮ ವ್ಯಕ್ತಿತ್ವ ನಿರ್ಮಾಣದಲ್ಲಿ ಎತ್ತಿದ ಕೈ, ದೇಶ ವಿದೇಶಗಳಲ್ಲಿರುವ ಜೆಎಸ್‌ಎಸ್ ಸಂಸ್ಥೆಗಳು ಆಧ್ಯಾತ್ಮದ ದಾರಿಯಲ್ಲಿ ಶಿಕ್ಷಣವನ್ನು ನೀಡುವುದರೊಂದಿಗೆ ಸಮಗ್ರ ವ್ಯಕ್ತಿತ್ವ ನಿರ್ಮಾಣಕ್ಕೆ ಸಹಕಾರಿಯಾಗಿದೆ ಎಂದು ಕಲಾಂ ಇದೇ ಸಂದರ್ಭದಲ್ಲಿ ಹೇಳಿದರು.

ಈ ಕೇಂದ್ರದ ಉದ್ದೇಶ ಆಧ್ಯಾತ್ಮದ ತತ್ವವನ್ನು ಅರ್ಥ ಮಾಡಿಕೊಳ್ಳಲು ಜನರಿಗೆ ಸಹಾಯ ಮಾಡುವುದರ ಜೊತೆಗೆ ಮಾನವೀಯ ಮೌಲ್ಯಗಳು ಹಾಗು ಧರ್ಮಗಳ ಸಾರವನ್ನು ಅವರಲ್ಲಿ ತುಂಬುವುದಾಗಿದೆ, ಇದು ಅತ್ಯಂತ ಮಹತ್ವದ ಯೋಜನೆ ಎಂದು ಕಲಾಂ ಬಣ್ಣಿಸಿದರು.

ಭೂಮಿಯನ್ನು ಬದುಕಲು ಸಾಧ್ಯವಾಗಬಲ್ಲ ಗ್ರಹವನ್ನಾಗಿಸಲು ನಾವೆಲ್ಲ ಕಾರ್ಯತತ್ಪರರಾಗಬೇಕು, ನಮ್ಮ ಜನರು ಮಾಲಿನ್ಯ ರಹಿತ ಸ್ವಚ್ಛ ವಾತವರಣದಲ್ಲಿ ಬದುಕುವುದು, ಬಡತನ ಮುಕ್ತ ಸಮೃದ್ಧಿ, ಯುದ್ಧದ ಭಯವಿಲ್ಲದ ಶಾಂತಿ ಮತ್ತು ಎಲ್ಲ ನಾಗರಿಕರಿಗೂ ಸಂತಸದ ಬದುಕು ನೀಡುವ ಉದ್ದೇಶ ಎಲ್ಲ ಪ್ರದೇಶ, ದೇಶಗಳು ಮತ್ತು ಜಗತ್ತನ್ನು ಒಂದು ಗೂಡಿಸಬಲ್ಲದು ಎಂದು ಕಲಾಂ ಹೇಳಿದರು.

ಉತ್ತರ ಭಾರತೀಯರನ್ನು ಕೂಡ ತಲುಪಲು ಸಾಧ್ಯವಾಗಲು ಇಂತಹ ಕೇಂದ್ರವನ್ನು ತೆರೆಯುವಂತೆ ಕಲಾಂ ಅವರೇ ನಮಗೆ ಸಲಹೆ ನೀಡಿದ್ದರು, ಈ ಭಾಗದ ಜನರು, ನಮ್ಮ ಸಂಸ್ಥೆಯ ಹಳೆ ವಿದ್ಯಾರ್ಥಿಗಳು, ಮಠದ ಅನುಯಾಯಿಗಳು ನೂತನ ಕೇಂದ್ರದ ಉದ್ದೇಶ ಈಡೇರಿಸುವಲ್ಲಿ ಶ್ರಮಿಸಬೇಕು ಎಂದು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ ಹೇಳಿದರು.

ಧರ್ಮ ಮತ್ತು ಆಧ್ಯಾತ್ಮ ವಿಶ್ವವ್ಯಾಪಿ. ನಮ್ಮ ಈ ಸಂಸ್ಥೆಯು ಜನರಲ್ಲಿ ಸಾಮರಸ್ಯದ ಜೀವನ, ಸಂತೃಪ್ತಿ, ಸಂತಸ ಮತ್ತು ಶಾಂತಿ ಮೂಡುವಂತೆ ಮಾಡಲು ಪೂರಕವಾದ ಅನೇಕ ಚಟುವಟಿಕೆಗಳನ್ನು ನಡೆಸಲಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದ ಸ್ವಾಮೀಜಿ ಮಾತನಾಡಿ, ಆಧ್ಯಾತ್ಮ ಎಂದರೆ ತನು, ಮನ ಮತ್ತು ಭಾವಗಳನ್ನು ಶುದ್ಧಿಗೊಳಿಸುವುದು, ಆಧ್ಯಾತ್ಮ ಎನ್ನುವುದು ಮಾನವನ ಜೀವನದ ಅತ್ಯಂತ ಪ್ರಮುಖ ಭಾಗ, ತಪ್ಪು ಮಾಡದ ವ್ಯಕ್ತಿ ಯಾವತ್ತೂ ದೇವರಿಗೆ ಹೆದರುವುದಿಲ್ಲ ಎಂದು ಅಭಿಪ್ರಾಯ ಪಟ್ಟರು.

ಜೆಎಸ್‌ಎಸ್ ಆಧುನಿಕ ಜಗತ್ತಿನ ಬೇಕು ಬೇಡಗಳಿಗೆ ಸ್ಪಂದಿಸುವುದರಲ್ಲಿ ಮುಂಚೂಣಿಯಲ್ಲಿದೆ, ಯುವ ಮನಸ್ಸುಗಳಲ್ಲಿ ಆಧ್ಯಾತ್ಮಿಕ ಮೌಲ್ಯಗಳನ್ನು ಉದ್ದೀಪನಗೊಳಿಸಿದರೆ ತಮ್ಮ ಸಮಸ್ಯೆಗಳಿಗೆ ಅವರೇ ಪರಿಹಾರ ಕಂಡು ಕೊಳ್ಳುತ್ತಾರೆ, ಜನರು ಈ ಕೇಂದ್ರದ ಸವಲತ್ತುಗಳನ್ನು ಬಳಸಿಕೊಳ್ಳಬೇಕು ಎಂದು ಹೇಳಿದರು.

ಶ್ರೀ ಸಿದ್ದಲಿಂಗ ಸ್ವಾಮೀಜಿ, ಮುಮ್ಮುಡಿ ನಿರ್ವಾಣ ಸ್ವಾಮೀಜಿ ಮುಂತಾದವರು ವೇದಿಕೆಯಲ್ಲಿದ್ದರು.

ಸುತ್ತೂರು ಮಠವು ಐದು ಕೋಟಿ ರೂಪಾಯಿ ವೆಚ್ಚದಲ್ಲಿ ದೆಹಲಿಯಲ್ಲಿ ಅತ್ಯಾಧುನಿಕ ಆಧ್ಯಾತ್ಮ ಮತ್ತು ಸಾಂಸ್ಕೃತಿಕ ಕೇಂದ್ರವನ್ನು ತೆರೆದಿದೆ. ಸಭೆ, ಸಮಾರಂಭ, ಸತ್ಸಂಗ, ಸಂಗೀತ ಕಛೇರಿ, ಸಾಂಸ್ಕೃತಿಕ ಕಾರ್ಯಕ್ರಮಗಳು, ಸೆಮಿನಾರ್, ಕಾರ್ಯಾಗಾರ, ಸಮ್ಮೇಳನಗಳನ್ನು ನಡೆಸುವ ವ್ಯವಸ್ಥೆ ಇಲ್ಲಿದೆ. ಅ

*ರಾಕೇಶ್ ಎನ್.ಎಸ್.*

# ಕನ್ನಡ ಶಾಲೆಯ ಪ್ರತಿಭಾವಂತ ವಿದ್ಯಾರ್ಥಿಗಳು

ದೆಹಲಿ ಕನ್ನಡ ಶಾಲೆಯ 10ನೇ ತರಗತಿಯ ಫಲಿತಾಂಶವು ಕಳೆದ ಸಾಲಿನಂತೆಯೇ ಈ ವರ್ಷವೂ 100% ದಾಖಲಿಸಿದೆ. 12ನೇ ತರಗತಿಯ ಈ ಸಲದ ಫಲಿತಾಂಶವು 91.30% ದಾಖಲಾಗಿದೆ. ಕಳೆದ ಸಾಲಿನಲ್ಲಿ ಫಲಿತಾಂಶವು 88% ಆಗಿತ್ತು. ಶಾಲೆಯ ಪ್ರಾಂಶುಪಾಲರಾದ ಶ್ರೀ ಕೆ.ಟಿ. ಗಣೇಶ್ ಅವರ ಮತ್ತು ಶಿಕ್ಷಕವೃಂದದ ಪ್ರೇರಣೆ ಮತ್ತು ಪ್ರೋತ್ಸಾಹದಿಂದ ದೆಹಲಿ ಕನ್ನಡ ಶಾಲೆಯಲ್ಲಿ ಉತ್ತಮ ಫಲಿತಾಂಶ ಬಂದಿದೆ.

ಹೆಚ್ಚು ಶ್ರೇಣಿ ಪಡೆದ ವಿದ್ಯಾರ್ಥಿಗಳು (10ನೇ ತರಗತಿ)

ರೋಹನ್ ಸಿಂಗ್ (8.8 ಸಿಜಿಪಿಎ), ಹೇಮಂತ್ ಚೌಹಾನ್ (8.6 ಸಿಜಿಪಿಎ), ವಿಪಿನ್ ಭಾರದ್ವಜ್ (8.4 ಸಿಜಿಪಿಎ)

12ನೇ ತರಗತಿಯ ವಿಜ್ಞಾನ ವಿಭಾಗ (76.19%)

ಗೌರವ್ ಮೆಹ್ತಾ (94% ಗರಿಷ್ಠ ಅಂಕ – 99 ರಸಾಯನ ಶಾಸ್ತ್ರ), ರಿಷಭ್ ಸೈನಿ (90% ಗರಿಷ್ಠ ಅಂಕ – 95 (ಇಂಜಿನಿಯರ್ ಗ್ರಾಫಿಕ್ಸ್), ಹಿಮಾಂಶು ಕುಮಾರ್ (89% ಗರಿಷ್ಠ ಅಂಕ –98 ಜೀವಶಾಸ್ತ್ರ)

12ನೇ ತರಗತಿಯ ವಾಣಿಜ್ಯ ವಿಭಾಗ (96.66%)


ಅನುಭವ್ ಭಾರದ್ವಜ್ (84% ಗರಿಷ್ಠ ಅಂಕ–92 ಇಂಗ್ಲೀಷ್), ಪೀಯೂಷ್ ಪಾಟಕ್ ಭಾರ್ಗವಿ (83% ಗರಿಷ್ಠ ಅಂಕ 97 ವ್ಯವಹಾರ ಅಧ್ಯಯನ), ಗಣೇಶ್ ಕೆ ಆರ್ ಬೋಜ್ವಾನಿ (80% ಗರಿಷ್ಠ ಅಂಕ–95 ಇಂಗ್ಲೀಷ್)

12ನೇ ತರಗತಿಯ ಕಲಾ ವಿಭಾಗ (100%)

ವೈಭವ್ ಕುಮಾರ್ (81% ಗರಿಷ್ಠ ಅಂಕ – 95 ರಾಜ್ಯಶಾಸ್ತ್ರ), ಶಿಲ್ಪ ಬಿರಾದಾರ್ (80% ಗರಿಷ್ಠ ಅಂಕ–94 ರಾಜ್ಯಶಾಸ್ತ್ರ), ಗ್ಲ್ಯಾಡ್‌ಸನ್ ರೋಡ್ರಿಗಸ್ (79% ಗರಿಷ್ಠ ಅಂಕ–95 ರಾಜ್ಯಶಾಸ್ತ್ರ) ಅ

*ಅರವಿಂದ ಬಿಜ್ಜೈ*

# ಇನ್ನಿಲ್ಲವಾದ ಕಲಾವಿದ ದತ್ತಾತ್ರೇಯ ಹನುಮಂತರಾವ್ ಕುಲಕರ್ಣಿ



ದೆಹಲಿಯ ಕಲಾಪ್ರೇಮಿಗಳಲ್ಲಿ ಡಿ.ಎಚ್. ಕುಲಕರ್ಣಿ "ದತ್ತಾ" (ಡಿಎಚ್‌ಕೆ)ಎಂದೇ ಹೆಸರುವಾಸಿಯಾಗಿದ್ದ ದತ್ತಾತ್ರೇಯ ಹನುಮಂತರಾವ್ ಕುಲಕರ್ಣಿ ಯವರು ಜನಿಸಿದ್ದು 21ನೇ ಫೆಬ್ರವರಿ 1933 ರಂದು ಕರ್ನಾಟಕದ ನಂದಿಕೇಶ್ವರ ಗ್ರಾಮದಲ್ಲಿ. ಪ್ರಾಥಮಿಕ ಶಿಕ್ಷಣವನ್ನು ಕರ್ನಾಟಕದಲ್ಲಿ ಪೂರೈಸಿ ದೆಹಲಿಯ ಸುಪ್ರಸಿದ್ಧ ಡೆಲ್ಲಿ ಕಾಲೇಜ ಆಫ್ ಆರ್ಟ್ ನಿಂದ ಡಿಪ್ಲೋಮಾ ಪಡೆದರು.

ಕರ್ನಾಟಕದ ಸುಪ್ರಸಿದ್ಧ ಐತಿಹಾಸಿಕ ನಗರ ಬಾದಾಮಿಯ ಆರ್ಕಿಯೋಲಾಜಿಕಲ್ ಸರ್ವೇ ಆಫ್ ಇಂಡಿಯಾದ ಕಛೇರಿಯಿಂದ ಅವರು ತಮ್ಮ ವೃತ್ತಿ ಜೀವನ ಆರಂಭಿಸಿದರು. ನಂತರ ದೆಹಲಿಯ ಟೌನ್ ಆಂಡ್ ಕಂಟ್ರಿ ಪ್ಲಾನಿಂಗ್ ಆರ್ಗನೈಜೇಶನ್‌ನಲ್ಲಿ ಸೀನಿಯರ್ ಮಾಡೆಲರ್ ಆಗಿ ಸೇವೆ ಸಲ್ಲಿಸಿದರು. ಉತ್ತಮ ಚಿತ್ರಕಲಾವಿದ ಮತ್ತು ಶಿಲ್ಪಕಲಾವಿದರಾಗಿದ್ದ ಅವರು ಕಳೆದ ಅರವತ್ತು ವರ್ಷಗಳಿಂದ ಕಲೆಯ ವಿವಿಧ ಪ್ರಾಕಾರಗಳಲ್ಲಿ ಹೊಸ ಹೊಸ ಪ್ರಯೋಗಗಳನ್ನು ಸದಾ ಮಾಡುತ್ತಲೇ ಉತ್ತಮ ಕಲಾಕೃತಿಗಳನ್ನು ರಚಿಸಿದ್ದಾರೆ.

ದತ್ತಾ ಅವರು 70 ಮತ್ತು 80ರ ಎರಡು ದಶಕಗಳಲ್ಲಿ 'ಬಾಟಿಕ್' ಕಲೆಯಲ್ಲಿ ಪ್ರಾವಿಣ್ಯತೆ ಪಡೆದರು. ನಿತ್ಯವೂ ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತಾ ತಾಪಮಾನ ನಿಯಂತ್ರಿಸಿ ಮಾಲ್ಟನ್ ವಾಕ್ಸ್ ಬಳಕೆಯ ಪದ್ಧತಿಯನ್ನು ಸುಧಾರಣೆಗೊಳಿಸಿ ಹೊಸ ತಾಂತ್ರಿಕತೆ ಕಂಡುಹಿಡಿದು ಬಹು ಬಣ್ಣಗಳ ಮಿಶ್ರಣದ ಬಳಕೆಯ ಬಾಟಿಕ್ ಪದ್ಧತಿಗೆ ಹುಟ್ಟು ಹಾಕಿದರು. ಈ ಹೊಸ ಪದ್ಧತಿಯಲ್ಲಿ ಸಾಧನೆಗೈದು ಅನೇಕ ಉತ್ತಮ ಕಲಾಕೃತಿಗಳನ್ನು ರಚಿಸಿ ಕಲಾ ಜಗತ್ತಿಗೆ ನೀಡಿದ್ದಾರೆ.

ಚಿತ್ರಕಲೆ ಹಾಗೂ ಶಿಲ್ಪಕಲೆಗಳಲ್ಲಿ ಇವರಿಗಿದ್ದ ಆಸಕ್ತಿಯ ದ್ಯೋತಕವಾಗಿ 1980ರಲ್ಲಿ ಧಾರವಾಡದಲ್ಲಿ ಒಂದು ಬಹು ದೊಡ್ಡ ಸ್ಟುಡಿಯೋ ಸ್ಥಾಪಿಸಿದರು. ಇವರಿಂದ ರೂಪ ತಳೆದ ಕಪ್ಪು ಕಲ್ಲು, ಗ್ರಾನೈಟ, ಅಮೃತ ಶಿಲೆ, ತಾಮ್ರ, ಕಟ್ಟಿಗೆ ಹಾಗು ಸಿಮೆಂಟಿನ ಕಲಾಕೃತಿಗಳು ನೋಡುಗರ ಮನ ಸೆಳೆಯುತ್ತವೆ. ಕಾಲ ಬದಲಾದಂತೆ ಕಲಾ ಮಾಧ್ಯಮ ಮಾತ್ರವಲ್ಲದೇ ಕಲಾಕೃತಿಗಳಲ್ಲೂ ಇವರು ಬದಲಾವಣೆ ಅಳವಡಿಸಿ ಕೊಂಡರು. ಇದಕ್ಕೆ ಇವರ ನವ್ಯ ಚಿತ್ರ ಹಾಗು ಶಿಲ್ಪ ಕಲಾಕೃತಿಗಳೇ ಸಾಕ್ಷಿಯಾಗಿವೆ.


ಅಜಂತಾ–ಎಲ್ಲೋರಾ ಗುಹೆಗಳಲ್ಲಿನ ಭಿತ್ತಿಚಿತ್ರಗಳ ಬಗೆಗೆ ಇವರಿಗೆ ವಿಶೇಷ ಆಸಕ್ತಿ ಇತ್ತು. ಬಾದಾಮಿಯ ಗುಹೆಗಳೂ ಕೂಡ ಇವರಿಗೆ ಆಸಕ್ತಿಯ ಕೇಂದ್ರಗಳಾಗಿದ್ದವು. ಬಾದಾಮಿಯ ಗುಹೆಗಳ ಬಗೆಗೆ ವಿಶೇಷ ಅಧ್ಯಯನ ಮಾಡಿ ಅಲ್ಲಿನ 30 ಅಡಿ ಉದ್ದದ ಜೀರ್ಣಾವಸ್ಥೆಯಲ್ಲಿದ್ದ ಪುಲಿಕೇಶಿಯ



ಭಿತ್ತಿಚಿತ್ರದ ವಿಶ್ಲೇಷಣೆ ಮಾಡಿದರು. ಕಳೆದೊಂದು ದಶಕದಿಂದ ಈ ಭಿತ್ತಿಚಿತ್ರ 'ದತ್ತಾ' ಅವರನ್ನು ಎಡೆಬಿಡದೇ ಕಾಡಿತ್ತು. ಅಂತೆಯೇ ಇವರು ವಿಶೇಷ ಅಧ್ಯಯನ ಮಾಡಿ ಅನೇಕ ಪುರಾತತ್ವ ಪುರಾವೆಗಳನ್ನು ಅಭ್ಯಸಿಸಿ ಈ 30 ಅಡಿ ಉದ್ದದ ಬಾದಾಮಿಯ ಗುಹೆಯಲ್ಲಿನ ಪುಲಿಕೇಶಿಯ ಭಿತ್ತಿಚಿತ್ರದ ಅತ್ಯಮೂಲ್ಯವೆನಿಸಬಹುದಾದ 15 ಅಡಿ ಉದ್ದದ ಕಲಾ ಪ್ರತಿಕೃತಿಯನ್ನು ರಚಿಸಿದ್ದಾರೆ.

ದೆಹಲಿ, ಮುಂಬೈ ಹಾಗೂ ಬೆಂಗಳೂರುಗಳಲ್ಲಿ ಇವರ ಕೃತಿಗಳು ಪ್ರದರ್ಶನಗೊಂಡಿವೆಯಲ್ಲದೇ ನಟೇಶನ್ ಆಂಟಿಕ್ವಿಟೀಸ್ ಮತ್ತು ಕಾವೇರಿ ಎಂಪೋರಿಯಂಗಳ ಮೂಲಕ ದೇಶ ವಿದೇಶ ತಲುಪಿವೆ.

ಇವರಲ್ಲಿದ್ದ ಪ್ರಯೋಗಶೀಲತೆ ಹಾಗೂ ಇವರು ಮಾಡಿದ ಅಗಾಧ ಸಾಧನೆಗೆ ಮನ್ನಣೆ ನೀಡಿ ಇವರನ್ನರಸಿ ಬಂದ ಪ್ರಶಸ್ತಿಗಳು ಅನೇಕ. ಅವುಗಳಲ್ಲಿ 1999ರಲ್ಲಿ ದೊರೆತ ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಪ್ರಶಸ್ತಿ, 2002ರಲ್ಲಿ ಲಭಿಸಿದ ಭಾರತ ಸರಕಾರದ ಟೆಕ್ಸ್‌ಟೈಲ್ ಮಂತ್ರಾಲಯದ ರಾಷ್ಟ್ರೀಯ ಪ್ರಶಸ್ತಿ ಪ್ರಮುಖವಾದವುಗಳು. ಇದಲ್ಲದೇ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಸದಸ್ಯರಾಗಿ ಆಧುನಿಕ ಕಲೆ ಮತ್ತು ಶಿಲ್ಪಕಲೆಯ ಬಗೆಗೆ ಅಕಾಡೆಮಿಗಿದ್ದ ಧೋರಣೆ ಬದಲಿಸಿ ಹೊಸತನ ಅಳವಡಿಸುವಲ್ಲಿ ಮುಂದಾಳತ್ವ ವಹಿಸಿದರಲ್ಲದೇ ಉತ್ತಮ ನಿರ್ದೇಶನ ನೀಡಿದರು.



ದತ್ತಾತ್ರೇಯ ಹನುಮಂತರಾವ್ ಕುಲಕರ್ಣಿಯವರು ಕನ್ನಡ ನೆಲದಲ್ಲಿ ಜನಿಸಿ ದೇಶದ ರಾಜದಾನಿ ದೆಹಲಿಯಲ್ಲಿ ನೆಲೆಸಿ ಉತ್ತಮ ಕಲಾಕೃತಿಗಳನ್ನು ರಚಿಸಿ ದೇಶದ ಕಲಾಸಿರಿ ಹೆಚ್ಚಿಸಿ ಇದೇ ಜುಲೈ 9ರಂದು ಇಹಲೋಕ ಯಾತ್ರೆ ಪೂರೈಸಿದ ಮಹಾನ್ ಕಲಾವಿದ. ಪತ್ನಿ, ಮೂವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿದ ದೆಹಲಿಯ ಹಿರಿಯ ಕಲಾವಿದ ದತ್ತಾತ್ರೇಯ ಹನುಮಂತರಾವ್ ಕುಲಕರ್ಣಿಯವರಿಗೆ ಶ್ರದ್ಧಾ ನಮನ. ಅ

***ಚೆನ್ನು ಎಸ್. ಮಠದ***

## ಸಂಘದಲ್ಲಿ ಕೇಂದ್ರದ ನೂತನ ಸಚಿವರು, ಸಂಸದರಿಗೆ ಅಭಿನಂದನೆ

# ಕರ್ನಾಟಕದ ಪರವಾಗಿ ಒಟ್ಟಾಗಿ ಕರ್ತವ್ಯವನ್ನು ನಿರ್ವಹಿಸುವ ನಿರ್ಣಯ




ಕಳೆದ ಕೆಲವು ದಶಕಗಳಿಂದ ಪಕ್ಷಾತೀತವಾಗಿ ಕರ್ನಾಟಕದ ಪರವಾಗಿ ಸಂಸತ್ತಿನ ಒಳಗೆ ಮತ್ತು ಹೊರಗೆ ಕರ್ನಾಟಕದ ಸಂಸತ್ ಸದಸ್ಯರು ಒಟ್ಟಾಗಿ ಹೋರಾಟವನ್ನು ಮಾಡುತ್ತಿದ್ದೇವೆ. ನಮ್ಮೆಲ್ಲರ ಮೇಲೆ ಸಾಕಷ್ಟು ಹೊಣೆಗಾರಿಕೆ ಇದೆ. ಎಲ್ಲಾ ಪಕ್ಷಗಳ ನಾವೆಲ್ಲರೂ ಒಟ್ಟಿಗೆ ಸೇರಿ ಕೆಲವು ಕರ್ತವ್ಯಗಳನ್ನು ನಿರ್ವಹಿಸಬೇಕಾಗಿದೆ ಎಂದು ಕೇಂದ್ರ ಸಚಿವ ಶ್ರೀ ಅನಂತ್ ಕುಮಾರ್ ಅವರು ಹೇಳಿದರು. ಅವರು ದೆಹಲಿ ಕರ್ನಾಟಕ ಸಂಘವು ಜುಲೈ 24ರಂದು ಸಂಘದ ಸಭಾಂಗಣದಲ್ಲಿ ನಡೆಸಿದ ಕೇಂದ್ರ ಸರ್ಕಾರದ ನೂತನ ಸಚಿವರ ಹಾಗೂ ಹೊಸದಾಗಿ ಆಯ್ಕೆಯಾದ ಲೋಕಸಭಾ ಹಾಗೂ ರಾಜ್ಯಸಭಾ ಸದಸ್ಯರನ್ನು ಅಭಿನಂದಿಸುವ ಕಾರ್ಯಕ್ರಮದಲ್ಲಿ ಮಾತಾಡುತ್ತಿದ್ದರು.

ಸಚಿವ ಶ್ರೀ ಅನಂತ ಕುಮಾರ್ ಅವರು ಪಕ್ಷಭೇದವಿಲ್ಲದೆ ಎಲ್ಲಾ ಸಂಸದರು ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಸಮುಚ್ಚಯದ ಸಮೀಪದಲ್ಲಿಯೇ ನಿರ್ಮಾಣಗೊಳ್ಳುತ್ತಿರುವ ಮೆಟ್ರೋ ನಿಲ್ದಾಣಕ್ಕೆ ಸಂಘದ ಅಥವಾ ಸರ್. ಎಂ. ವಿಶ್ವೇಶ್ವರಯ್ಯ ಅವರ ಹೆಸರಿಡಲು ಕೇಂದ್ರ ನಗರಾಭಿವೃದ್ಧಿ ಸಚಿವ ಶ್ರೀ ವೆಂಕಯ್ಯ ನಾಯ್ಡು ಮತ್ತು ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರ ಮನವೊಲಿಸುವುದಾಗಿ ಹೇಳಿದರು. ಶಾಸ್ತ್ರೀಯ ಭಾಷೆಯ ಆಧಾರದಲ್ಲಿ ಇತರ ಭಾಷಿಕರಿಗಿಂತ ಕಡಿಮೆ ಅನುದಾನ ಕನ್ನಡಕ್ಕಿದ್ದು ಇದನ್ನು ಹೆಚ್ಚಿಸುವಲ್ಲಿ ಕೆಲಸ ಮಾಡುವುದಾಗಿ ನುಡಿದರು.

ಕೃಷ್ಣಾ ನದಿ ಮತ್ತು ಕಾವೇರಿ ನದಿ ವಿಷಯಗಳು ಬಂದಂತಹ ಸಂದರ್ಭದಲ್ಲಿ ನಾವೆಲ್ಲರೂ ಒಟ್ಟಿಗೆ ಸೇರಿ ಅದು ಸಮಸ್ಯೆಯ ಕಗ್ಗಂಟಾಗುವುದನ್ನು ತಪ್ಪಿಸಿದ್ದೇವೆ. ಇನ್ನು ಮುಂದೆ ಕೂಡಾ ಕಾವೇರಿ ಮತ್ತು ಕೃಷ್ಣಾದಲ್ಲಿ ಕರ್ನಾಟಕಕ್ಕೆ ನ್ಯಾಯವಾದ ಪಾಲು ಸಿಗುವ ಹಾಗೆ ಕರ್ನಾಟಕದ ಎಲ್ಲಾ ಸಂಸತ್ ಸದಸ್ಯರು –ಸಚಿವರಾಗಿರಲೀ ಅಥವಾ ಕೇವಲ ಸಂಸತ್ ಸದಸ್ಯರಾಗಿರಲಿ–ತಮ್ಮ ಮೂಲ ಕರ್ತವ್ಯವನ್ನು ನಿರ್ವಹಿಸುತ್ತೇವೆ ಎಂದರು. ಸಂಘದ ಅಧ್ಯಕ್ಷರು ಐದು ವರ್ಷಗಳಲ್ಲಿ ನಮ್ಮ ಸಾಧನೆಯನ್ನು ನೋಡಿ ಅಭಿನಂದಿಸುವ ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ನಾವು ಏನು ಸಾಧನೆಯನ್ನು ಮಾಡಿದ್ದೇವೆ ಎಂದು ನಮ್ಮ ನಮ್ಮ ಸಂಸತ್ ಕ್ಷೇತ್ರಗಳಲ್ಲಿ ಜನರು ನೋಡುತ್ತಾರೆ. ನಮ್ಮ ಕೊಡುಗೆಗಳ ಕುರಿತು ಮತದಾರರು ನೋಡುತ್ತಾರೆ. ಇಂದು ತಮ್ಮ ಜನಪ್ರತಿನಿಧಿ ಅತ್ಯಂತ ಹೆಚ್ಚಿನ ವಿಶ್ಲೇಷಣೆಗೆ ಒಳಗಾಗುತ್ತಾರೆ. ಅದಕ್ಕಾಗಿ ನಾವೆಲ್ಲರೂ ಕೆಲಸವನ್ನು ಮಾಡಬೇಕಾಗುತ್ತದೆ. ಮೌಲ್ಯಮಾಪನದ ನಿರೀಕ್ಷೆಗೆ ತಕ್ಕಂತೆ ಕನ್ನಡದ ನೆಲ, ಜಲ ಮತ್ತು ಭಾಷೆಯನ್ನು ಕಾಪಾಡುವ ಕರ್ತವ್ಯವನ್ನು ಮಾಡುತ್ತೇವೆ ಎಂದು ಶ್ರೀ ಅನಂತ್ ಕುಮಾರ್ ಅವರು ಹೇಳಿದರು.

ಪ್ರಾಸ್ತಾವಿಕವಾಗಿ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ನಾವು ಸಂಘದಿಂದ ಈಗ ಆತ್ಮೀಯವಾಗಿ ಎಲ್ಲಾ ಸಂಸದರನ್ನು ದೆಹಲಿಗೆ ಸ್ವಾಗತಿಸುತ್ತಿದ್ದೇವೆ. ಐದು ವರ್ಷಗಳ ನಂತರ ನೀವು ಕರ್ನಾಟಕಕ್ಕೆ ಮತ್ತು ದೇಶಕ್ಕೆ ನೀಡಿರುವ ಗಣನೀಯ ಸೇವೆಯನ್ನು ಪಟ್ಟಿ ಮಾಡಿ ತಮ್ಮನ್ನು ನಾವು ಮತ್ತೆ ಅಭಿನಂದಿಸಲಿದ್ದೇವೆ ಎಂದರು. ಇದೇ ಸಂದರ್ಭದಲ್ಲಿ ಸಂಘದ ಸಮೀಪ ನೂತನವಾಗಿ ನಿರ್ಮಾಣಗೊಳ್ಳುತ್ತಿರುವ ಮೆಟ್ರೋ ನಿಲ್ದಾಣಕ್ಕೆ ದೆಹಲಿ ಕರ್ನಾಟಕ ಸಂಘ ಮೆಟ್ರೊ ನಿಲ್ದಾಣ ಅಥವಾ ಸರ್.ಎಂ. ವಿಶ್ವೇಶ್ವರಯ್ಯ ಮೆಟ್ರೋ ನಿಲ್ದಾಣವೆಂದು ಹೆಸರಿಸುವ ಬೇಡಿಕೆಯನ್ನು ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಸಂಸದರ ಮುಂದಿಟ್ಟರು. ದೆಹಲಿ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರನ್ನು ಕೂಡಲೇ ನೇಮಿಸಬೇಕು ಮತ್ತು ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ ಕನ್ನಡ ಅಧ್ಯಯನ ಪೀಠ ಆರಂಭಿಸಲು ಎಲ್ಲಾ ಸಂಸದರ ಸಹಕಾರವನ್ನು ಕೋರಿದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಕೇಂದ್ರ ಸಚಿವ ಶ್ರೀ ವೆಂಕಯ್ಯ ನಾಯ್ಡು ಅವರು ಮೆಟ್ರೋ ನಿಲ್ದಾಣಕ್ಕೆ ಸಂಘದ ಹೆಸರಿಡುವ ಬಗ್ಗೆ ಭರವಸೆ ನೀಡಿದರಲ್ಲದೇ ದೆಹಲಿ ಕರ್ನಾಟಕ ಸಂಘ ಹಾಗೂ ಕನ್ನಡ ಶಾಲೆಗೆ ತಮ್ಮಿಂದ ಸಾಧ್ಯವಾದ ಎಲ್ಲಾ ಸಹಕಾರ ನೀಡುವುದಾಗಿ ಭರವಸೆ ಇತ್ತರು. ಚುನಾವಣಾ ಸಮಯದಲ್ಲಿ ರಾಜಕೀಯವಾಗಿ ಹೋರಾಡಿದರೂ ಕರ್ನಾಟಕದ ಜನತೆ ಮತ್ತು ಕನ್ನಡದ ವಿಚಾರ ಬಂದಾಗ ನಾವೆಲ್ಲರೂ ಒಂದಾಗಿ ಹೋರಾಡುವೆವು ಎಂದು ಶ್ರೀ ನಾಯ್ಡು ಅವರು ನುಡಿದರು.

ಕಾರ್ಯಕ್ರಮದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಮಾಜಿ ಮುಖ್ಯಮಂತ್ರಿ ಹಾಗೂ ಲೋಕಸಭಾ ಸದಸ್ಯ ಶ್ರೀ ಬಿ.ಎಸ್. ಯಡ್ಯೂರಪ್ಪ ಅವರು ಕರ್ನಾಟಕ ರಾಜ್ಯದ ಅಭಿವೃದ್ಧಿಗಾಗಿ ಏನೇನು ಸವಲತ್ತುಗಳನ್ನು ತರಲು ಸಾಧ್ಯವಿದೆಯೋ ಅದಕ್ಕಾಗಿ ನಾವೆಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡುತ್ತೇವೆ. ನಮ್ಮ ನಡೆನುಡಿಗಳಿಂದ ಎಲ್ಲಾ ಕನ್ನಡಿಗರ ಅಭಿಮಾನಕ್ಕೆ ತಕ್ಕುದಾಗಿ ನಡೆದುಕೊಳ್ಳುತ್ತೇವೆ. ರಾಜ್ಯದ ಹಿತಕ್ಕಾಗಿ ನಮ್ಮನ್ನು ಜನರು ಲೋಕಸಭೆಗೆ ಆಯ್ಕೆ ಮಾಡಿ ಕಳುಹಿಸಿದ್ದಾರೆ ಎಂಬ ಅರಿವು ನಮಗಿದೆ ಎಂದು ನುಡಿದರು.

ರಾಜ್ಯದ ಅಭಿವೃದ್ಧಿಯ ವಿಚಾರ ಬಂದಾಗ ನಾವೆಲ್ಲರೂ ಒಗ್ಗಟ್ಟಾಗಿ ಕೆಲಸಮಾಡುವುದು ನಮ್ಮ ಜವಾಬ್ದಾರಿ. ಅಲ್ಲದೇ ಜನತೆಯ ನಿರೀಕ್ಷೆಗಳನ್ನು ಮುಂದಿಟ್ಟು ಸಾಧನೆಯ ಕೆಲಸಗಳನ್ನು ಮಾಡುವುದು ಅಗತ್ಯವಾಗಿದೆ ಎಂದು ಲೋಕಸಭಾ ಸದಸ್ಯ ಶ್ರೀ ಮುದ್ದಹನುಮೇ ಗೌಡರು ತಿಳಿಸಿದರು. ಲೋಕಸಭಾ ಸದಸ್ಯ ಶ್ರೀ ಧ್ರುವನಾರಾಯಣ ಮತ್ತು ರಾಜ್ಯಸಭಾ ಸದಸ್ಯ ಪ್ರೊ. ರಾಜೀವ್ ಗೌಡ ಅವರೂ ದೆಹಲಿಯಲ್ಲಿದ್ದು ರಾಜ್ಯದ ಜನತೆಯ ಆಶೋತ್ತರಗಳಿಗೆ ಸ್ಪಂದಿಸುವುದಾಗಿ ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಕೇಂದ್ರ ಸಚಿವರುಗಳಾದ ಶ್ರೀ ಎಂ. ವೆಂಕಯ್ಯ ನಾಯ್ಡು (ನಗರಾಭಿವೃದ್ಧಿ, ವಸತಿ ಮತ್ತು ನಗರ ಬಡತನ ನಿರ್ಮೂಲನ ಮತ್ತು ಸಂಸದೀಯ ವಿಷಯಗಳ ಸಚಿವರು), ಶ್ರೀ ಅನಂತ ಕುಮಾರ್ (ರಾಸಾಯನಿಕ ಮತ್ತು ರಸ ಗೊಬ್ಬರ ಸಚಿವರು), ಶ್ರೀ ಜಿ.ಎಂ. ಸಿದ್ದೇಶ್ (ನಾಗರಿಕ ವಿಮಾನಯಾನ), ಲೋಕಸಭಾ ಸದಸ್ಯರಾದ ಶ್ರೀ ಸುರೇಶ್ ಸಿ ಅಂಗಡಿ



ಶ್ರೀ ವೆಂಕಯ್ಯ ನಾಯ್ಡು (ನಗರಾಭಿವೃದ್ಧಿ, ವಸತಿ ಮತ್ತು ನಗರ ಬಡತನ ನಿರ್ಮೂಲನ ಮತ್ತು ಸಂಸದೀಯ ವಿಷಯಗಳ ಸಚಿವರು)



**ಶ್ರೀ ಅನಂತ ಕುಮಾರ್ (ರಾಸಾಯನಿಕ ಮತ್ತು ರಸ ಗೊಬ್ಬರ ಸಚಿವರು)**



**ಶ್ರೀ ಜಿ.ಎಂ. ಸಿದ್ಧೇಶ್ (ನಾಗರಿಕ ವಿಮಾನಯಾನ)**



**ಶ್ರೀ ಸುರೇಶ್ ಅಂಗಡಿ, ಸಂಸದರು**



**ಶ್ರೀ ಡಿ.ಕೆ. ಸುರೇಶ್, ಸಂಸದರು**

(ಬೆಳಗಾವಿ), ಶ್ರೀ ರಮೇಶ ಜಿಗಜಿಣಗಿ (ಬಿಜಾಪುರ), ಶ್ರೀ ಭಗವಂತ್ ಖೂಬ (ಬೀದರ್), ಶ್ರೀ ಕರಡಿ ಸಂಗಣ್ಣ (ಕೊಪ್ಪಳ), ಶ್ರೀ ಶಿವಕುಮಾರ್ ಉದಾಸಿ (ಹಾವೇರಿ), ಶ್ರೀ ಪ್ರಹ್ಲಾದ ಜೋಶಿ (ಧಾರವಾಡ), ಶ್ರೀ ಬಿ.ಎಸ್. ಯಡ್ಯೂರಪ್ಪ (ಶಿವಮೊಗ್ಗ), ಕು. ಶೋಭಾ ಕರಂದ್ಲಾಜೆ (ಉಡುಪಿ–ಚಿಕ್ಕಮಗಳೂರು), ಶ್ರೀ ನಳಿನ್ ಕುಮಾರ್ ಕಟೀಲ್ (ದಕ್ಷಿಣ ಕನ್ನಡ), ಶ್ರೀ ಬಿ.ಎನ್. ಚಂದ್ರಪ್ಪ (ಚಿತ್ರದುರ್ಗ), ಶ್ರೀ ಎಸ್.ಪಿ. ಮುದ್ದಹನುಮೇ ಗೌಡ (ತುಮಕೂರು), ಶ್ರೀ ಪ್ರತಾಪ ಸಿಂಹ (ಮೈಸೂರು), ಶ್ರೀ ಆರ್. ಧ್ರುವ ನಾರಾಯಣ (ಚಾಮರಾಜ ನಗರ), ಶ್ರೀ ಡಿ.ಕೆ. ಸುರೇಶ್ (ಬೆಂಗಳೂರು ಗ್ರಾಮೀಣ), ರಾಜ್ಯಸಭಾ ಸದಸ್ಯ ಪ್ರೊ. ರಾಜೀವ್ ಗೌಡ ಅವರನ್ನು ಅಭಿನಂದಿಸಿ ಶುಭ ಹಾರೈಸಲಾಯಿತು. ಶ್ರೀ ಆಸ್ಕರ್ ಫರ್ನಾಂಡಿಸ್ ಅವರು ಕಾರ್ಯಕ್ರಮಕ್ಕೆ ಮುಂಚಿತವಾಗಿ ಆಗಮಿಸಿ ಶುಭ ಸಂದೇಶವನ್ನು ನೀಡಿದರು. ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳು ಮತ್ತು ಸದಸ್ಯರು ಜನಪ್ರತಿನಿಧಿಗಳಿಗೆ ಪುಷ್ಪಗುಚ್ಛ ನೀಡಿ, ಶಾಲು ಹೊದಿಸಿ, ಸಂಘದ ಸ್ಮರಣಿಕೆಯನ್ನಿತ್ತು ಅಭಿನಂದಿಸಿದರು.

ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ವಂದನಾರ್ಪಣೆ ಮಾಡಿದರು. ಶ್ರೀ ಆರ್. ರೇಣುಕುಮಾರ್ ಅವರು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರೂಪಿಸಿದರು.



**ಶ್ರೀ ಪ್ರತಾಪ ಸಿಂಹ, ಸಂಸದರು**



**ಶ್ರೀ ರಮೇಶ ಜಿಗಜಿಣಗಿ, ಸಂಸದರು**



**ಶ್ರೀ ಭಗವಂತ ಖೂಬ, ಸಂಸದರು**

## ಕನ್ನಡದಲ್ಲಿ ಪ್ರಮಾಣ ವಚನ

ಕೇಂದ್ರ ಸಚಿವ ಶ್ರೀ ಅನಂತ್ ಕುಮಾರ್ ಅವರು 1996ರಲ್ಲಿ ಸಂಸತ್ತಿಗೆ ಬಂದ ಹೊಸತರಲ್ಲಿ ಲೋಕಸಭಾ ಸದಸ್ಯನಾಗಿ ಅವರೊಬ್ಬರೇ ಕನ್ನಡದಲ್ಲಿ ಪ್ರಮಾಣವಚನ ಸ್ವೀಕರಿಸಿದರು. "ಅಂದಿನಿಂದ ಕನ್ನಡದಲ್ಲಿ ಪ್ರಮಾಣವಚನ ಸ್ವೀಕರಿಸಲು ಬೇರೆಲ್ಲಾ ಲೋಕಸಭಾ ಸದಸ್ಯರಿಗೆ ವಿನಂತಿ ಮಾಡುತ್ತಿದ್ದೆ. ಕಳೆದ ಬಾರಿ ತಾನು ಐದನೇ ಬಾರಿಗೆ ಲೋಕಸಭಾ ಸದಸ್ಯನಾಗಿ ಬಂದಾಗ ಕರ್ನಾಟಕದ 28 ಲೋಕಸಭಾ ಸದಸ್ಯರಲ್ಲಿ 26 ಮಂದಿ ಕನ್ನಡದಲ್ಲಿ ಪ್ರಮಾಣವಚನ ಸ್ವೀಕರಿಸಿದರು. ಆದರೆ ಈ ಬಾರಿ 28ಕ್ಕೆ 28 ಮಂದಿಯೂ ಕನ್ನಡದಲ್ಲಿ ಪ್ರಮಾಣವಚನ ಸ್ವೀಕರಿಸಿದರು. ಅಂದರೆ ಕನ್ನಡಪರವಾದ ಆಂದೋಳನವನ್ನು ಲೋಕಸಭಾ ಸದಸ್ಯರು ಸಂಸತ್ತಿನಲ್ಲಿ ಪ್ರಮಾಣವಚನವನ್ನು ಕನ್ನಡದಲ್ಲಿ ಸ್ವೀಕರಿಸುವ ಮೂಲಕವೂ ನಡೆಸಬಹುದು ಎಂದು ಕರ್ನಾಟಕದ ಸಂಸತ್‌ಸದಸ್ಯರು ತೋರಿಸಿಕೊಟ್ಟಿದ್ದಾರೆ" ಎಂದು ಶ್ರೀ ಅನಂತ್ ಕುಮಾರ್ ಅವರು ಹೇಳಿದರು. ಈಗ ಎಲ್ಲಾ ರಾಜ್ಯದವರು ಕೂಡಾ ತಮ್ಮ ತಮ್ಮ ಭಾಷೆಯಲ್ಲಿ ಪ್ರಮಾಣವಚನ ಸ್ವೀಕರಿಸುವಂತಹ ಸ್ಥಿತಿ ನಿರ್ಮಾಣವಾಗಿದೆ. ಅದಕ್ಕೆ ನಾಂದಿ ಹಾಕಿದವರು ನಾವು ಕನ್ನಡಿಗರು, ಕರ್ನಾಟಕದವರು ಅಂತ ಬಹಳ ಹೆಮ್ಮೆ ಪಡುವ ವಿಚಾರ ಎಂದು ಅವರು ಹೇಳಿದರು.

## ಸಂಸತ್ತಿನಲ್ಲಿ ಕರ್ನಾಟಕ ಕಾರ್ನರ್

ನಮ್ಮ ಸಂಸತ್ ಭವನದ ಸೆಂಟ್ರಲ್ ಹಾಲ್‌ನಲ್ಲಿರುವ ಕಾಫಿ ಕುಡಿಯುವ ಕಾರ್ನರ್ ಕರ್ನಾಟಕ ಕಾರ್ನರೆಂದೇ ಪ್ರಸಿದ್ಧವಾಗಿದೆ ಎಂದು ಕೇಂದ್ರ ಸಚಿವ ಶ್ರೀ ಅನಂತ್ ಕುಮಾರ್ ಅವರು ಹೇಳಿದರು. ಬಹುಷಃ ನಮ್ಮ ಸಂಸತ್ತಿನಲ್ಲಿ ಕಾವೇರಿ, ಕೃಷ್ಣಾ ನದಿ ವಿಷಯ ಸೇರಿದಂತೆ ನೆಲ, ಜಲ ಮತ್ತು ಗಡಿಯ ಸಮಸ್ಯೆಯ ಹೋರಾಟಗಳು ಪಕ್ಷಾತೀತವಾಗಿ ಅಲ್ಲಿಯೇ ಆರಂಭವಾಗಿವೆ ಎಂದು ಅವರು ವಿವರಿಸಿದರು.

## ಸಂಘದ ಮೇಲೆ ಪ್ರೀತಿ

ದೆಹಲಿ ಕರ್ನಾಟಕ ಸಂಘ ಅಂದರೆ ದೆಹಲಿಯಲ್ಲಿರುವಂತಹ ಕರ್ನಾಟಕ. ನಮಗೆ ದೆಹಲಿಯಲ್ಲಿ ನಮ್ಮ ಹೃದಯಕ್ಕೆ ಹತ್ತಿರವಿರುವ ಕರ್ನಾಟಕವನ್ನು



ಶ್ರೀ ಪ್ರಹ್ಲಾದ ಜೋಶಿ, ಸಂಸದರು



ಶ್ರೀ ಬಿ.ಎಸ್. ಯಡ್ಯೂರಪ್ಪ, ಸಂಸದರು



ಶ್ರೀ ಕರಡಿ ಸಂಗಣ್ಣ, ಸಂಸದರು



ಶ್ರೀ ಶೋಭಾ ಕರಂದ್ಲಾಜೆ, ಸಂಸದರು



ಶ್ರೀ ಶಿವಕುಮಾರ ಉದಾಸಿ, ಸಂಸದರು



ಶ್ರೀ ನಳಿನ್‌ಕುಮಾರ್ ಕಟೀಲು, ಸಂಸದರು



ಶ್ರೀ ಬಿ.ಎನ್. ಚಂದ್ರಪ್ಪ, ಸಂಸದರು



ಶ್ರೀ ಮುದ್ದಹನುಮೇ ಗೌಡ, ಸಂಸದರು



ಶ್ರೀ ಆರ್. ಧ್ರುವನಾರಾಯಣ, ಸಂಸದರು



ಪ್ರೊ. ರಾಜೀವ್ ಗೌಡ, ಸಂಸದರು

ಹುಡುಕಬೇಕೆಂದರೆ ಸಂಘಕ್ಕೆ ಬರಬೇಕು. ದೆಹಲಿ ಕರ್ನಾಟಕ ಸಂಘ ಅತ್ಯುತ್ತಮವಾದ ಕೆಲಸಗಳನ್ನು ಮಾಡುತ್ತಿದೆ. ಕನ್ನಡ ಪುಸ್ತಕಗಳ ಉತ್ತಮ ಗ್ರಂಥಾಲಯವಿದೆ. ಉತ್ತಮ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಲು ಒಳ್ಳೆಯ ಸಭಾಭವನವಿದೆ ಎಂದು ಶ್ರೀ ಅನಂತ್ ಕುಮಾರ್ ಅವರು ಪ್ರಶಂಸಿಸಿದರು. ದೆಹಲಿ ಕರ್ನಾಟಕ ಸಂಘದ ನೇತೃತ್ವದಲ್ಲಿ ವರ್ಷಕ್ಕೆ ಒಂದು ಬಾರಿ ಕರ್ನಾಟಕದಿಂದ ಬಂದು ದೆಹಲಿಯಲ್ಲಿ ನೆಲೆಸಿರುವ ಎಲ್ಲಾ ಕನ್ನಡಿಗರು ಸೇರುವಂತಹ ಒಂದು ಕಾರ್ಯಕ್ರಮವಾಗಬೇಕು. ಅದರಲ್ಲಿ ಕರ್ನಾಟಕದ ಎಲ್ಲಾ ಸಂಸತ್ ಸದಸ್ಯರೂ ಪಾಲ್ಗೊಳ್ಳುವಂತಹ ಅನುಕೂಲ ಮಾಡಬೇಕು. ಇದೊಂದು ಸಾಂಸ್ಕೃತಿಕ, ಸಾಹಿತ್ಯಿಕ ಹಾಗೂ ಕನ್ನಡ ಭಾಷೆಯ ನೆಲೆಯಲ್ಲಿ ನಡೆಯಬೇಕಾದಂತಹ ಕಾರ್ಯಕ್ರಮವಾಗಬೇಕು ಎಂದು ಶ್ರೀ ಅನಂತ್ ಕುಮಾರ್ ಅವರು ಹೇಳಿದರು.

## ಕೆ.ಆರ್. ನಾಗರಾಜರನ್ನು ನೆನೆದ ಅನಂತ್ ಕುಮಾರ್

ದೆಹಲಿ ಕರ್ನಾಟಕ ಸಂಘದ ಬಗ್ಗೆ ಆರಂಭದಲ್ಲಿ ಸಂಘವು ಈ ಸ್ವರೂಪಕ್ಕೆ ಬರಲು ಹೋರಾಟ ಮಾಡಿದವರು ವಕೀಲರಾಗಿದ್ದಂತಹ ಕೆ.ಆರ್. ನಾಗರಾಜರು. ಅವರನ್ನು ನಾವು ನೆನಪಿಸಿಕೊಳ್ಳಬೇಕು ಎಂದ ಕೇಂದ್ರ ಸಚಿವ ಶ್ರೀ ಅನಂತ್ ಕುಮಾರ್ ಅವರು ದೆಹಲಿ ಕರ್ನಾಟಕ ಸಂಘವು, ಕರ್ನಾಟಕದಿಂದ ಬಂದು ಇಲ್ಲಿ ನೆಲೆಸಿರುವ ಕನ್ನಡಿಗರ ವಿಶೇಷ ಪ್ರಯತ್ನದಿಂದ ಇಂತಹ ಉತ್ತಮ ಪರಿಸ್ಥಿತಿಗೆ ಬಂದಿದೆ ಎಂದು ಹೇಳಿದರು. ಅ

*ಬಾಲಕೃಷ್ಣ ನಾಯ್ಕ್ ಡಿ.*



ಶ್ರೀ ಆಸ್ಕರ್ ಫರ್ನಾಂಡಿಸ್, ಸಂಸದರು

# ಕಾಯಕವೇ ಕೈಲಾಸ: ಜಾಗೇಶ್ವರದಲ್ಲೊಂದು ಜಾಹೀರಾತು

"ನೀವು ಕರೆ ಮಾಡಿರುವ ಚಂದಾದಾರರು ಸಧ್ಯಕ್ಕೆ ವ್ಯಾಪ್ತಿ ಪ್ರದೇಶದ ಹೊರಗಿದ್ದಾರೆ. ದಯವಿಟ್ಟು ಸ್ವಲ್ಪ ಸಮಯದ ನಂತರ ಮತ್ತೊಮ್ಮೆ ಪ್ರಯತ್ನಿಸಿ." ಎಂದು ಮೊಬೈಲ್ ಕಂಪನಿಯೊಂದರ ಮೊಟ್ಟ ಮೊದಲನೆಯ ಪ್ರಾಂಪ್ಟ್ ರೆಕಾರ್ಡ್ ಮಾಡುತ್ತಿದ್ದಾಗ ನನಗೆಲ್ಲಿ ಗೊತ್ತಿತ್ತು ಐದು ವರ್ಷಗಳ ನಂತರ ಇನ್ನೊಂದು 3ಜಿ ನೆಟ್‌ವರ್ಕ್ ಮೊಬೈಲ್ ಕನೆಕ್ಷನ್‌ನ ವಾಣಿಜ್ಯ ಜಾಹಿರಾತಿಗಾಗಿ ಅಲ್ಮೋರಾ ಜಿಲ್ಲೆಯ ಸಮೀಪದಲ್ಲಿದ್ದ ಜಾಗೇಶ್ವರಕ್ಕೆ ಹೋಗಿ, ನನ್ನ ಮಗನ ಜೊತೆಗೆ 'ತಾಯಿ ಮಗನ' ಪಾತ್ರವಹಿಸಿ, "ಏನು ನಿನ್ನ ನೆಟ್‌ವರ್ಕ್ ಇಲ್ಲೂ ಸಹ ಬರುತ್ತಾ?" ಅಂತ ಕ್ಯಾಮೆರಾ ಮುಂದೆ ನಿಂತು ಡೈಲಾಗ್ ಹೇಳ್ತೀನೀಂತ?

ನಾವೆಲ್ಲಾ ತಾಯ್ನಾಡಿನಿಂದ ದೂರವಿದ್ದರೂ ನಮ್ಮದೇ ಆದ ರೀತಿಯಲ್ಲಿ ಕನ್ನಡಾಂಬೆಯ ಸೇವೆ ಸಲ್ಲಿಸ್ತಾ ಇದ್ದೀವಿ. ಅದೇ ರೀತಿ ನನ್ನ ಸೇವೆಯನ್ನು ಮೆಚ್ಚಿ ಆ ಪರಶಿವ ಒಲಿದದ್ದು ಹೇಗೇಂತ ನಿಮ್ಮೊಂದಿಗೆ ನನ್ನ ಅನುಭವ ಹಂಚಿಕೊಳ್ಳೋಕೆ ಬಯಸ್ತೀನಿ.

ಇದನ್ನೇ 'ಕಾಯಕವೇ ಕೈಲಾಸ" ಅಂತ ಅಂದಿರಬಹುದೂಂತ ನನಗೂ ಮನದಟ್ಟವಾದದ್ದು ಹೋದ ತಿಂಗಳು ನನಗೊಂದು ಸ್ಟುಡಿಯೋದಿಂದ ಫೋನ್ ಬಂದಾಗ. "ಮ್ಯಾಮ್.. ನಿಮ್ಮನ್ನು ಕನ್ನಡದ ಒಂದು ಟಿವಿ ಕಮರ್ಶಿಯಲ್ ಆ್ಯಡ್ ಗೆ ಸೆಲೆಕ್ಟ್ ಮಾಡಿದ್ದಾರೆ. ದಯವಿಟ್ಟು ಅದರ ನಿರ್ದೇಶಕರನ್ನ ಹೋಗಿ ಭೇಟಿ ಮಾಡಿ. ಶೂಟಿಂಗ್ ದೆಹಲಿಯಿಂದ ಹೊರಗೆ ಇದೆ" ಅಂತ.

ಯಾರಿದು ನನಗೆ ಗೊತ್ತಿಲ್ಲದಂತೆ ಟಿವಿ ಗಾಗಿ ಆಯ್ಕೆ ಮಾಡಿದ್ದು? ಅಂತ ಯೋಚನೆ ಬಂದ್ರೂ, ಸರಿ ಅಂತ ಉತ್ತರಿಸಿ ಫೋನ್ ಇಟ್ಟು ಅದರ ಬಗ್ಗೆ ಮರೆತೂ ಬಿಟ್ಟೆ. ಎರಡು ದಿನಗಳ ನಂತರ 'ನಾನು ಜಸ್ವಿನ್ ಜಸ್ಸಿ ಅಂತ. ಶೂಟಿಂಗ್ ಬಗ್ಗೆ ಡಿಟೇಲ್ಸ್ ಕೊಡ್ತಿನಿ. ಆದಷ್ಟು ಬೇಗ ನಮ್ಮ ಆಫೀಸಿಗೆ ಬಂದು ಭೇಟಿಯಾಗಿ" ಅನ್ನುತ್ತಾ ಪಟಪಟನೇ ಅಡ್ರೆಸ್ ಕೊಟ್ಟು ಫೋನ್ ಇಟ್ಟೇಬಿಟ್ರು ಆ ಮಹಾಶಯ.

ನಮ್ಮೆಜಮಾನ್ರಿಗೆ "ರ್ರೀ... 19 ವರ್ಷಗಳ ನಂತರ ಮತ್ತೆ ಟಿವಿ ಜಾಹಿರಾತಿನಲ್ಲಿ ಪಾತ್ರವಹಿಸುವ ಅವಕಾಶ ಬಂದಿದೆ. ಏನು ಮಾಡ್ಲಿ? ಒಂದು ಸಲ ಮಿ. ಜಸ್ಸಿನ್ನ ಭೇಟಿಮಾಡಿ ಬರೋಣ್ವಾ?" ಅಂತ ಕೇಳಿದ್ದಕ್ಕೆ "ಸರಿ ಹೋಗೋಣ" ಅಂದರು. ಮೊದಲು ಈ ಜಸ್ವಿನ್ ಜಸ್ಸಿ ಯಾರು ಅಂತ ಗೂಗಲ್ ಸರ್ಚ್ ಮಾಡಿ ನೋಡಿದಾಗ ತಿಳಿದದ್ದು ಮಿ. ಜಸ್ಸಿಯವರು ಹಿಂದೆ ಟಿವಿಯಲ್ಲಿ ಹಿಂದಿ ವಾರ್ತೆಗಳನ್ನು ಓದುತ್ತಿದ್ದವರೂಂತ.

ಜೊತೆಗೆ ಅತ್ಯಂತ ಶೀಘ್ರಗತಿಯ ಚಿತ್ರ ತಯಾರಕರೆಂದು ಲಿಮ್ಕಾ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ಮಾಡಿದ, ಪ್ರೇರಣೆಯ ಗುರು ಎಂದೇ ಪ್ರಸಿದ್ಧರಾದ ಅತ್ಯಂತ ಅನುಭವಿ ವ್ಯಕ್ತಿ. ಇವರೊಂದಿಗೆ ಕೆಲಸ ಮಾಡುವ ಸುಯೋಗ ಭಾರೀ ಖುಶಿ ತಂದಿತ್ತು. ನನ್ನ ಮಗಳು–"ಅಮ್ಮ, ಸಾವಿರಾರು ಜನ ಆಡಿಶನ್ ಕೊಟ್ಟು ಕಾಯ್ತಾ ಇರ್ತಾರೆ, ನೋಡಿ, ಈ ಕೆಲ್ಸಾ ನಿಮ್ಮನ್ನ ಹುಡುಕಿಕೊಂಡು ಬಂದಿದೆ ಪ್ಲೀಸ್ ಬಿಡಬೇಡಿ" ಅಂತ ಹೇಳಿದಾಗ ಕಣ್ಣು ಒದ್ದೆಯಾದವು.

ಅದೆಷ್ಟೋ ನಾಟಕಗಳನ್ನ ಬರೆದು, ನಿರ್ದೇಶಿಸಿಸೋಕೆ, ನಟಿಸೋಕೆ, ಹಾಡುಗಳನ್ನ ಹಾಡೋಕೆ ಜೊತೆಗೆ ನೃತ್ಯ ಸಂಯೋಜನೆ ಮಾಡೋಕೆ, ಅನೇಕ ಪ್ರಶಸ್ತಿಗಳನ್ನ ಪಡೆಯೋಕೆ ಅವಕಾಶ ಹಾಗೂ ಶಕ್ತಿಯಿತ್ತ ಮಾತೆ ಶಾರದಾಂಬೆಗೆ ಹಾಗೂ ನನ್ನ ಇಷ್ಟ ದೇವ ಗಣಪನಿಗೆ ಮನದಲ್ಲೇ ವಂದಿಸಿದೆ.

ಕಲಾರಾಧನೆಯ ಬೀಡು ನಮ್ಮ ದೆಹಲಿ ಕರ್ನಾಟಕ ಸಂಘವನ್ನು ಇಲ್ಲಿ ನೆನೆಯಲೇ ಬೇಕು. ಸುಂದರ ಸುಸಜ್ಜಿತ ವೇದಿಕೆಯನ್ನು ಕಲ್ಪಿಸಿಕೊಡುವುದರ ಜೊತೆಗೆ ಪ್ರತಿಯೊಬ್ಬ ಕಲಾವಿದನ ಕಲೆಯನ್ನು ಪೋಷಿಸುತ್ತಿದೆ ನಮ್ಮ ಈ ದೆಹಲಿ ಕರ್ನಾಟಕ ಸಂಘ.

ಮರುದಿನ ಜಸ್ಸಿಯವರನ್ನು ಭೇಟಿಯಾದಾಗ ಅವರು ನೇರವಾಗಿ ನನ್ನನ್ನು ಮತ್ತು ನನ್ನ ಮಗ ಶುಚಿರನನ್ನು ಜಾಹೀರಾತಿನಲ್ಲಿ ನಟಿಸಲು ಆಯ್ಕೆ ಮಾಡಿದರು. ಇದಕ್ಕಂತಾರೆ ನೋಡಿ– ಹೊರನಾಡಿನಲ್ಲಿದ್ದರೂ ತಾಯ್ನಾಡಿನಲ್ಲಿ ಮೆರೆಯುವ ಭಾಗ್ಯ ಅಂತ. ಈ ಜಾಹೀರಾತಿನಲ್ಲಿ ನನ್ನ ಮಗಳಾಗಿ ವಂದನಾ ಶೆಟ್ಟಿ ಆಯ್ಕೆಯಾಗಿದ್ದೂ ತುಂಬಾ ಸಂತೋಷವಾಗಿತ್ತು.

ಜಾಗೇಶ್ವರದ ಮಾಹಿತಿಯನ್ನು ನೆಟ್‌ನಲ್ಲಿ ನೋಡಿದ ಬಳಿಕ ಪ್ರತ್ಯಕ್ಷ ನೋಡುವ ಸುವರ್ಣಾವಕಾಶದ ಬಗ್ಗೆ ರಾತ್ರಿಯಿಡೀ ಯೋಚಿಸುತ್ತಾ ಮಲಗಿದೆ.

ಶನಿವಾರ, ಜುಲೈ 5 ಕ್ಕೆ ಬೆಳಗಿನ ಜಾವಾ ನಾಲ್ಕು ಗಂಟೆಗೆ ಉತ್ತರಾಖಂಡದ ಅಲ್ಮೋರಾ ಜಿಲ್ಲೆಯಲ್ಲಿನ ಕುಮಾವೋ ಕ್ಷೇತ್ರದಲ್ಲಿದ್ದ, ಹನ್ನೆರಡು ಜೋತಿರ್ಲಿಂಗಗಳಲ್ಲಿ ಒಂದಾದ, ದೇಗುಲಗಳ ಮಹಾ ಬೀಡು ಜಾಗೇಶ್ವರಕ್ಕೆ







ಶೂಟಿಂಗ್‌ಗಾಗಿ ಹೊರಟೆವು. ಇದು ಅಲ್ಮೋರಾದಿಂದ 36 ಕಿಲೋ ಮೀಟರ್ ದೂರದಲ್ಲಿದೆ.

ಮೂರು ಇನೋವಾ ಗಾಡಿಗಳ ತುಂಬಾ ಮೂರು ಭಾಷೆಯ ಕಲಾವಿದರ ಜೊತೆಗೆ ಮಿ. ಜಸ್ಸಿಯವರ ಕುಟುಂಬ ಹಾಗೂ ಅವರ ಶೂಟಿಂಗ್ ಸಿಬ್ಬಂದಿ ಹೊರಟೆವು. ಬಂಗಾಳಿ ಭಾಷೆಯ ಕಲಾವಿದರೂ ನಮ್ಮ ಗಾಡಿಯಲ್ಲೇ ಇದ್ದರು. ಯಾಕೋ ಅವರೆಲ್ಲಾ ಹೆಚ್ಚು ಮಾತಾಡ್ತಾ ಇರಲಿಲ್ಲ. ನಾನು ಮತ್ತು ವಂದನಾ 'ನಿರಂತರ ನಾಟಕದ' ಬಗ್ಗೆ ಮಾತನಾಡ್ತಾ ಇದ್ವಿ. ನಮ್ಮ ವಟಗುಟ್ಟುವಿಕೆ ಅವರಿಗೆ ತಲೆನೋವಾಗಿರಬಹುದು. ಗಜರೋಲಾದಲ್ಲಿನ ಮ್ಯಾಕ್‌ಡೋನಾಲ್ಡಿನಲ್ಲಿ ತಿಂಡಿ ಮುಗಿಸುತ್ತಿದ್ದಂತೆಯೇ ನಮ್ಮ ಮೌನದ ಗೋಡೆಯನ್ನು ಉರುಳಿಸಿ ಬಿಟ್ಟೆ. ಮನಸಿದ್ದರೆ ಕಲ್ಲನ್ನೂ ಮಾತನಾಡಿಸಬಹುದು ಅಲ್ವೆ? ಒಂದೆರಡು ಫೋಟೋ ಅವರೊಂದಿಗೆ ಕ್ಲಿಕ್ಕಿಸಿದ್ದೇ ತಡ ಬಂಗಾಳಿಯ ಲಲಿತಾಜಿ ತಂತಾನೇ ಕನ್ನಡದ ಸವಿತಾಜಿ ಜೊತೆಗೂಡಿದರು.

ಮಧ್ಯಾಹ್ನ ಒಂದೂವರೆಗೆ ಭೀಮ್‌ತಾಲ್ ಮುಟ್ಟಿದೆವು. ಸುಂದರ ನಯನ ಮನೋಹರವಾದ ಪ್ರಶಾಂತವಾಗಿದ್ದರೂ ಅದ್ಭುತ ಸೌಂದರ್ಯದ ಸಿರಿಯನ್ನು ಹೊಂದಿದ ಭೀಮ್‌ತಾಲ್ ಲೇಕನ್ನು ನೋಡ್ತಿದ್ರೆ ಸಮಯ ಹೋದದ್ದೇ ತಿಳಿಯೋದಿಲ್ಲ. ಗೆಸ್ಟ್‌ಹೌಸಿನಲ್ಲಿ ಮಧ್ಯಾಹ್ನದ ಊಟ ಮಾಡಿದ ಬಳಿಕ ಹತ್ತು ನಿಮಿಷ ಅಲ್ಲೇ ಸುತ್ತಾಡಿ ಪುನಃ ಜಾಗೇಶ್ವರ ಬೆಟ್ಟ ಹತ್ತೋಕೆ ಪ್ರಾರಂಭಿಸಿದೆವು. ರುದ್ರ ರಮಣೀಯ ಬೆಟ್ಟಗಳಲ್ಲಿ ರಸ್ತೆಯನ್ನು ಕೊರೆದು ಓಡಾಡಲು ಯೋಗ್ಯ ಮಾಡಿದ ಆ ಕೆಲಸಗಾರರ ಶ್ರಮ ಸಾರ್ಥಕವೆನಿಸಿತು.

ಅಲ್ಲದೇ ಅತ್ಯಂತ ತಿರುವುಗಳಿಂದ ತುಂಬಿದ ಕಿರಿದಾದ ರಸ್ತೆಯಲ್ಲಿ ಗಾಡಿ ನಡೆಸೋದು ಸುಲಭವಲ್ಲ. "ನೋಡಿ, ನಾಳೆ ಬೆಳಿಗ್ಗೆ ಆರು ಗಂಟೆಗೆ ರೆಡಿಯಾಗಿ, ಮಳೆ ಬಂದ್ರೆ ಬಂದದ್ದು ವ್ಯರ್ಥವಾಗುತ್ತೆ. ಆದಷ್ಟು ಬೇಗ ಶೂಟಿಂಗ್ ಪ್ರಾರಂಭಿಸೋಣ' ಅಂತ ಜಸ್ಸಿಯವ್ರು ಹೇಳಿದಾಗಲೇ ನಾವಿಲ್ಲಿ ಕೆಲಸಕ್ಕೆ ಬಂದಿದ್ದೀವೀಂತ ಎಲ್ಲರಿಗೂ ನೆನಪಾದದ್ದು.

ದೆಹಲಿಯ ಮಾಲಿನ್ಯದಿಂದ ತುಂಬಿದ ಗಾಳಿಯಿಂದ, ವಾಹನಗಳ ಕರ್ಕಶ ಸ್ವರದಿಂದ ಬಲು ದೂರ, ತೇಲುವ ಮೋಡಗಳ ಮಧ್ಯದಲ್ಲಿ, ಸುತ್ತಲೂ ಹರಡಿದ ಹಚ್ಚ ಹಸಿರು ದೇವದಾರು ವೃಕ್ಷಗಳಿಂದ ಆವರಿಸಿದ ಬೆಟ್ಟಗಳನ್ನು ನೋಡುತ್ತ 'ಮಿಸ್ಟಿಕ್ ರಿಸಾರ್ಟ್' ಎಂಬ ಫಲಕ ಹೊತ್ತಿದ್ದ ಗೇಟನ್ನು ದಾಟಿ ಒಳಗೆ ಹೋದಾಗ ಸ್ವರ್ಗ ಸುಖದ ಅನುಭವ. ಇದರ ಮಾಲೀಕರಾದ ನಗುಮುಖದ ನಿತಿನ್ ಅಲ್ಲೇ ಇದ್ದುಕೊಂಡು ತಮ್ಮ ರೆಸಾರ್ಟನ್ನು ಸ್ವತಃ ನೋಡಿಕೊಳ್ತಾ ಇದ್ದಾರೆ.

ಒಂದೆರಡು ಗಂಟೆ ವಿಶ್ರಮಿಸಿದ ಬಳಿಕ ರಾತ್ರಿ ಎಂಟಕ್ಕೆ ಒಳಾಂಗಣದಲ್ಲಿ ಮೂರೂ ಭಾಷೆಯ ಹುಡುಗಿಯರ ಶೂಟಿಂಗ್ ಮಾಡಲಾಯ್ತು. ಮರುದಿನ ಬೆಳಿಗ್ಗೆ ನನ್ನ ಹಾಗೂ ಶುಚಿರನ ಶೂಟಿಂಗ್.

ಎಲ್ಲೇ ಹೋದರೂ ನನ್ನ ಜೊತೆಯಲ್ಲಿ ತಿಂಡಿ ಮಾಡಿಕೊಂಡು ಹೋಗೋದು ನನ್ನ ರೂಢಿ. ಬೆಳಿಗ್ಗೆ ನಾಲ್ಕಕ್ಕೇ ಎದ್ದು ತಯಾರಾಗಿ, ನನ್ನ ತಿಂಡಿಯ ದೊಡ್ಡ ಗಂಟನ್ನು ಹಿಡಿದು ರೂಮಿನಿಂದ ಹೊರಗೆ ಬಂದಾಗ "ಮ್ಯಾಮ್, ಈಗ ನಿಮ್ಮದೇ ಶೂಟಿಂಗ್ ಇದೆ. ನೆನಪಿದೆ ಅಲ್ವಾ?" ಅಂತ ಎಲ್ಲರೂ ಛೇಡಿಸಿದಾಗ, "ಸ್ವಲ್ಪ ಹೊತ್ತಿನ ನಂತರ ಯಾರೆಲ್ಲಾ ಈ ಗಂಟನ್ನ ಹೊರೋಕೆ ಮುಂದೆ ಬರ್ತಾರೇಂತ ನೋಡೋಣ" ಅಂತ ನಕ್ಕು ಮುನ್ನಡೆದೆ.

ನಮ್ಮ ಶೂಟಿಂಗ್ ಕುಬೇರನ ದೇವಸ್ಥಾನದ ಮೆಟ್ಟಿಲುಗಳ ಮೇಲೆ ಇತ್ತು. ಧನದೇವತೆಯಾದ ಕುಬೇರನ ದೇವಾಲಯವು ಜಾಗೇಶ್ವರ ದೇವಾಲಯಗಳ ಸಮೂಹದಿಂದ ಪೂರ್ವ ದಿಕ್ಕಿನಲ್ಲಿ ಜಟಾಗಂಗೆಯೆಂಬ ನದಿಯನ್ನು ದಾಟಿದ ಬಳಿಕ ಒಂದು ಚಿಕ್ಕ ದಿಬ್ಬದ ಮೇಲಿದೆ. ಇದು ಏಕಮುಖೀ ಲಿಂಗರೂಪದಲ್ಲಿದೆ. ಕುಬೇರನ ಪೂಜೆ ದಿನನಿತ್ಯ ಮಾಡಿದಲ್ಲಿ ಮನೆಯಲ್ಲಿದ್ದ ಬೊಕ್ಕಸ ಎಂದಿಗೂ ಬರಿದಾಗದಂತೆ.

ಮೊಬೈಲ್ 3ಜಿ ನೆಟ್‌ವರ್ಕ್‌ನ ಜಾಹೀರಾತಿಗಾಗಿ ದೇವರಿಗೆ ನಮಸ್ಕರಿಸುತ್ತಾ ಮೆಟ್ಟಿಲುಗಳನ್ನು ಇಳಿಯುತ್ತಾ ನನ್ನ ಮಗನ ಜೊತೆಗೆ ಮಾತನಾಡುವ ಸನ್ನಿವೇಶವನ್ನು ಸೆರೆಹಿಡಿಯಬೇಕಾಗಿತ್ತು. ಜಿಮ್ಮಿ ಜಿಬ್ ಕೆಮೆರಾಗಳು ಹಾಗೂ ನಿರ್ದೇಶಕರ 'ರೋಲ್, ಕೆಮೆರಾ, ಆಕ್ಷನ್' ಎಂಬ ಸೂಚನೆ ಸಿಗುತ್ತಿದ್ದಂತೆಯೇ ಮೊದಲು ಬಂಗಾಳಿಯ ಶೂಟಿಂಗ್ ಪ್ರಾರಂಭವಾಯ್ತು. ಮೊದಲ ಬಾರಿ ಕೆಮೆರಾ ಎದುರಿಸುತ್ತಿದ್ದ ಕಾರಣ ಅವರಿಗೆ ಸ್ವಲ್ಪ ಭಯವಾಗಿ ಮಾತಾಡೋಕೆ ಕಷ್ಟವಾಗುತ್ತಿತ್ತು. ಆದರೂ ಜಸ್ಸಿಯವರ ಪ್ರೋತ್ಸಾಹಿಸುವ ಮಾತುಗಳು ತುಂಬಾ ನೆರವಾದವು.

ಹೆಚ್ಚು ಜನರಿಲ್ಲಿ ಬಾರದ ಕಾರಣ ಈ ಜಾಹೀರಾತಿನಲ್ಲಿ ಭಕ್ತರಂತೆ ನಾವೇ ದೇವಸ್ಥಾನಕ್ಕೆ ಪ್ರದಕ್ಷಿಣೆ ಹಾಕುತ್ತಾ ತಿರುಗಬೇಕಾಗಿತ್ತು. ಅದೆಷ್ಟು ಬಾರಿ ಪ್ರದಕ್ಷಿಣೆಯನ್ನು ಹಾಕಿದೆವೋ ಗೊತ್ತಿಲ್ಲ. ಕುಬೇರನ ಅನುಗ್ರಹ ಎಲ್ಲರ ಮೇಲಾಗಲಿ, ಮಳೆ ಬಾರದೇ ನಿರ್ವಿಘ್ನತೆಯಿಂದ ಬಂದ ಕೆಲಸ ಮುಗಿಯಲಿ ಅಂತ ಬೇಡಿಕೊಳ್ಳುತ್ತಾ ದೇವಾಲಯವನ್ನು ಅದೆಷ್ಟು ಬಾರಿ ಸುತ್ತಿದೆವೋ ಗೊತ್ತಿಲ್ಲ. ನಂತರ ಕನ್ನಡದ ಶೂಟಿಂಗ್ ಶುರುವಾಯ್ತು.

ನಾಲ್ಕು ಟೇಕಿನಲ್ಲೇ 'ಓಕೆ' ಆಗಿದ್ದು ನಮ್ಮಿಬ್ಬರಿಗೂ ಭಾರೀ ಖುಶಿ ತಂದಿತು. ಇನ್ನು ಇಂಗ್ಲೀಷಿನವರ ಸರದಿ, ಆದರೆ ಲವ್ಲಿನ್ ಮಧು ಇನ್ನೂ ಬಂದಿರಲಿಲ್ಲ. ಹಾಗಾಗಿ ಎಲ್ಲರಿಗೂ ಕಾಯಲೇಬೇಕಾದ ಸ್ಥಿತಿ. ಗಂಟೆ ಒಂಬತ್ತಾಗಿತ್ತು. ಎಲ್ಲರ ಹೊಟ್ಟೆ ತಾಳ ಹಾಕೋಕೆ ಶುರು ಮಾಡಿತ್ತು.

ಮಳೆಯ ಭಯದಿಂದ ಕೇವಲ ಚಹಾಪಾನ ಮಾಡಿದವರೇ ಇಲ್ಲಿಗೆ ಬಂದು ಬಿಟ್ಟಿದ್ದೆವಲ್ಲ. ಸರಿ, ನನ್ನ ತಿಂಡಿಯ ಗಂಟು ಬಿಚ್ಚಿ, ಬೌಲುಗಳಲ್ಲಿ ಹಾಕಿ ಕೊಟ್ಟಾಗ 'ನೀವು ತಿಂಡಿ ತಂದದ್ದು ಒಳ್ಳೇದಾಯ್ತು ಮ್ಯಾಮ್, ಇಲ್ಲಿ ಇಷ್ಟು ಬೇಗ ಏನೂ ತಿನ್ನೋಕೆ ಸಿಗೋದಿಲ್ಲಾ. ರೆಸಾರ್ಟ್ ಸಹ 10 ಕಿಲೋ ಮೀಟರ್ ದೂರದಲ್ಲಿದೆ, ಶೂಟಿಂಗ್ ಮುಗಿಸಿ ಅಲ್ಲಿಗೆ ಮುಟ್ಟೋದು ಯಾವಾಗ ಅಂತಾನೂ ಗೊತ್ತಿಲ್ಲ.' ಎನ್ನುತ್ತಾ ಎಲ್ಲರೂ ಸಂತೋಷದಿಂದ ತಿಂಡಿ ತಿಂದಾಗ ಕುಬೇರನ ಎದುರಿಗೆ ಅನ್ನದಾನ ಮಾಡುವ ಯೋಗ ನನಗೆ ದೊರೆಯಿತಲ್ಲಾ ಎಂದು ಮನಸಿಗೆ ತುಂಬಾ ಸಮಾಧಾನ ಸಿಕ್ಕಿತು. ಕೊನೆಗೆ ಇಂಗ್ಲೀಷಿನ ಶೂಟಿಂಗ್ ಸಹ



ಮುಗಿಯಿತು. ಬಂದ ಕೆಲಸ ಸಮರ್ಪಕವಾಗಿ ಮುಗಿದಾಕ್ಷಣ ಜಾಗೇಶ್ವರನ ದೇಗುಲಗಳನ್ನು ನೋಡಲು ಹೊರಟೆವು.

**ಜಾಗೇಶ್ವರ ದೇವಾಲಯ**

ನಿತೀನ್ ಜಾಗೇಶ್ವರ ದೇವಾಲಯದ ಮುಖ್ಯ ಅರ್ಚಕರಾದ ಪಂಡಿತ ಆಚಾರ್ಯ ಗಿರೀಶ ಭಟ್ಟರನ್ನು ಭೇಟಿ ಮಾಡಿಸಿದ. ಅವರು ಅಲ್ಲಿಯ ಕ್ಷೇತ್ರ ಮಹಿಮೆಯನ್ನು ಉದಾಹರಣೆ ಸಮೇತ ವಿವರಿಸತೊಡಗಿದರು. 33 ಕೋಟಿ ದೇವಿದೇವತೆಗಳು ವಾಸಿಸುತ್ತಿರುವ ಉತ್ತರಾಖಂಡಕ್ಕೆ ದೇವಭೂಮಿ ಎಂದು ಕರೆಯುತ್ತಾರಂತೆ. ಜಾಗೇಶ್ವರನ ಸ್ಥಾನ ಸಮುದ್ರ ಮಟ್ಟದಿಂದ 1,870 ಮೀಟರ್ ಎತ್ತರದಲ್ಲಿದೆ. ಅಲಕನಂದಾ ನದಿಯು ಹಿಮಾಲಯದಿಂದ ಹರಿಯುತ್ತಾ ಶಿವನ ಜಟೆಯಿಂದ ಧುಮುಕುವ 'ಜಟಾಗಂಗಾ' ನದಿಯೊಡನೆ ಸಂಗಮಿಸುವ ಈ ಕ್ಷೇತ್ರದಲ್ಲೇ 'ಜಾಗೇಶ್ವರ' ನೆನೆದವರ ಮನದಲ್ಲಿ, ಭಕ್ತರ ಬೇಡಿಕೆಗಳನ್ನು ಪೂರೈಸುತ್ತಾ ನಿಂತಿದ್ದಾನೆ.

ದಾರುಕಾವನ ಅಂದ್ರೆ ದೇವದಾರ ವೃಕ್ಷಗಳಿಂದ ಆವೃತವಾದ ಕಾನನ ಕ್ಷೇತ್ರ. ಇಲ್ಲಿ ಮಹಾದೇವ ಜಾಗೃತ ರೂಪದಲ್ಲಿದ್ದ ಕಾರಣ ಇವನನ್ನು ಜಾಗೇಶ್ವರನೆಂದು ಕರೆಯುತ್ತಾರೆ. ಸ್ಕಂದ ಪುರಾಣದ ಪ್ರಕಾರ ಜಾಗೇಶ್ವರನನ್ನು ಹನ್ನೆರಡು ಜೋತಿರ್ಲಿಂಗಗಳಲ್ಲಿ ಮೊದಲನೆಯ ಜೋತಿರ್ಲಿಂಗ ಎಂದು ಪರಿಗಣಿಸಲಾಗಿದೆ. ಪ್ರಾಚೀನ ಕಾಲದಲ್ಲಿ ನಾಗವಂಶಜರು ಇಲ್ಲಿ ವಾಸಿಸುತ್ತಿದ್ದರಂತೆ. ಅವರು ಶಿವನ ಪರಮ ಭಕ್ತರಾದ ಕಾರಣ ಇವನನ್ನು 'ನಾಗೇಶ' ಎಂದೂ ಈ ಭೂಮಿಯನ್ನು 'ನಾಗ ಭೂಮಿ' ಎಂದೂ ಕರೆಯುತ್ತಾರೆ.

ಹಿಂದೆ ದಕ್ಷ ಮಹಾರಾಜನು ತನ್ನ ಅರಮನೆಯಲ್ಲಿ ಅತ್ಯಂತ ದೊಡ್ಡದಾಗ ಯಜ್ಞವನ್ನು ಆಯೋಜಿಸಿ ಸಮಸ್ತ ಬಂಧು– ಬಳಗದವರಿಗೆ ಹಾಗೂ ಪರಿಚಯಸ್ಥರಿಗೆಲ್ಲ ಆಮಂತ್ರಣ ಕೊಟ್ಟರೂ ತನ್ನ ಮಗಳಾದ ಸತಿ ಹಾಗೂ ಸ್ಮಶಾನವಾಸಿ ಅಳಿಯ ಸದಾಶಿವನನ್ನು ಆಮಂತ್ರಿಸಲಿಲ್ಲ. ಕರೆಯದೇ ತವರಿಗೆ ಹೋಗದಿರೆಂದು ಹೇಳಿದ ಪತಿಯ ಮಾತನ್ನು ಮೀರಿ ಸತಿ ತಂದೆಯ ಮನೆಗೆ ತಲುಪುತ್ತಾಳೆ.

ಅಲ್ಲಿ ಎಲ್ಲರ ಮುಂದೆ ತನ್ನ ಹಾಗೂ ಸ್ಮಶಾನವಾಸಿ ಪತಿಯನ್ನು ಅಪಮಾನಿಸಿದ ತಂದೆಯ ಮೇಲೆ ಕೋಪಿಸಿದ ಸತಿ ಅದೇ ಯಜ್ಞಕುಂಡದಲ್ಲಿ ಹಾರಿ ಆತ್ಮತ್ಯಾಗ ಮಾಡುತ್ತಾಳೆ. ಪತ್ನಿಯನ್ನರಸುತ್ತಾ ಬಂದ ಶಿವನಿಗೆ ಆಕೆಯ ದೇಹ ಭಸ್ಮವಾದದ್ದು ಕಂಡು ದುಃಖದಿಂದ ಅವಳನ್ನು ನೆನೆಯುತ್ತಾ ಅದೇ ಭಸ್ಮವನ್ನು ಮೈತುಂಬಾ ಲೇಪಿಸಿಕೊಂಡು ಅಲ್ಲಿಂದ ವಿರಹಿಯಾಗಿ ಬೆಟ್ಟಗುಡ್ಡಗಳನ್ನು ಅಲೆಯುತ್ತಾ ತಿರುಗುತ್ತಿದ್ದನಂತೆ.

ಕೆಲವು ವರ್ಷಗಳವರೆಗೆ ಸಮಾಧಿಯಲ್ಲಿ ಕುಳಿತು ತಪಸ್ಸು ಮಾಡುತ್ತಿದ್ದನಂತೆ. ಎಲ್ಲೆಲ್ಲೋ ಅಲೆದು ಕೊನೆಗೆ ಈ ದಾರುಕಾವನದಲ್ಲಿ ಬಂದಾಗ ಇಲ್ಲಿಯ ರಮಣೀಯ ಸ್ಥಳಕ್ಕೆ ಮೆಚ್ಚಿ ತಪಸ್ಸಿನಲ್ಲಿ ಮಗ್ನನಾದನಂತೆ. ಆಗ ಸಪ್ತ ಋಷಿಗಳೂ ಇಲ್ಲೇ ವಾಸಿಸುತ್ತಿದ್ದರಂತೆ.

ಒಂದು ದಿನ ಸಪ್ತ ಋಷಿಗಳ ಪತ್ನಿಯರು ಯಜ್ಞಕ್ಕಾಗಿ ಹಣ್ಣು, ಒಣ ಕಟ್ಟಿಗೆಯನ್ನು ಆರಿಸಲು ಬಂದಾಗ ಅಲ್ಲಿ ತಪೋನಿರತನಾದ, ದಿವ್ಯ ತೇಜಸ್ವಿ ವ್ಯಕ್ತಿಯನ್ನು ಕಂಡು ಮರುಳಾಗಿ, ತಪಸ್ಸಿನಿಂದ ಎಬ್ಬಿಸಲು, ಆತನನ್ನು ಆಕರ್ಷಿಸಲು ಅದೆಷ್ಟೋ ಹೊತ್ತಿನವರೆಗೆ ನೃತ್ಯಮಾಡಿದರಂತೆ. ಕೊನೆಗೆ ಸುಸ್ತಾಗಿ ಮೂರ್ಛೆಹೋಗಿ ಬಿದ್ದರಂತೆ.

ರಾತ್ರಿಯಾದರೂ ಮರಳಿ ಬಾರದ ಪತ್ನಿಯರನ್ನು ಅರಿಸುತ್ತಾ ಹೊರಟ ಸಪ್ತ ಋಷಿಗಳಿಗೆ ಅಸ್ತವ್ಯಸ್ತ ಸ್ಥಿತಿಯಲ್ಲಿ ಕೆಳಗುರುಳಿದ ಪತ್ನಿಯರು ಕಂಡರು. ಅಲ್ಲೇ ಕಣ್ಣುಮುಚ್ಚಿ ಕುಳಿತ ಯೋಗಿಯನ್ನು ಕಂಡು ಇವನೆಸಗಿದ ವ್ಯಭಿಚಾರದಿಂದ ತಮ್ಮ ಪತ್ನಿಯರು ಹೀಗೆ ಮೂರ್ಛಿತರಾಗಿದ್ದಾರೆಂದು ಭಾವಿಸಿ ಕ್ರೋಧಿತರಾಗಿ ಆತನಿಗೆ 'ನಿನಗೆ ನಿನ್ನ ಲಿಂಗದ ಮೇಲೆ ತುಂಬಾ ಅಭಿಮಾನವಿದ್ದಂತೆ ಕಾಣಿಸುತ್ತೆ. ಆ ಲಿಂಗ ನಿನ್ನ ಶರೀರದಿಂದ ಬೇರ್ಪಟ್ಟು ಭೂಲೋಕದಲ್ಲಿ ಹೋಗಿ ಬೀಳಲಿ' ಎಂದು ಶಾಪ ಕೊಟ್ಟರು. ಆಗ ಕಣ್ಣು ತೆರೆದ ಶಿವ 'ನನ್ನ ದೋಷವಿಲ್ಲದಿದ್ದರೂ ನೀವು ಶಾಪ ಕೊಟ್ಟಿರುವಿರಿ, ಸರಿ, ನಾನು ಭೂಲೋಕದಲ್ಲಿ ಲಿಂಗ ರೂಪದಲ್ಲೇ ಪೂಜಿಸಲ್ಪಡುವೆ. ಆದರೆ ನೀವು ಮಾತ್ರ ಆಕಾಶದಲ್ಲಿ ನಕ್ಷತ್ರರಾಗಿ ಉಳಿಯಿರಿ' ಎಂದು ಮರುಶಾಪ ಕೊಟ್ಟನಂತೆ.

ಈಗಲೂ ಶಿವಲಿಂಗದ ಆರಾಧನೆ ಭೂಲೋಕದಲ್ಲಿ ಎಲ್ಲೆಡೆಗೂ ನಡೆಯುತ್ತಿದೆ ಹಾಗೂ ಹೊಳೆಯುವ ಸಪ್ತಋಷಿ ಮಂಡಲವನ್ನು ಆಗಸದಲ್ಲಿ ಕಾಣಬಹುದು. ಸಪ್ತಋಷಿಗಳ ಶಾಪದಿಂದ ಶಿವನ ಲಿಂಗ ಭೂಮಿಯ ಮೇಲೆ ಬಿದ್ದಾಕ್ಷಣ ಭಯಂಕರ ಅಗ್ನಿಯ ಜ್ವಾಲೆಗಳು ಹತ್ತಿ ಎಲ್ಲೆಡೆಗೂ ಹಾಹಾಕಾರ ಶುರುವಾಯಿತಂತೆ. ಜ್ವಾಲೆಯ ತಾಪವನ್ನು ಭೂಮಾತೆ ಸಹ ತಾಳಲಾರದಾದಳು.

ಆಗ ಎಲ್ಲರೂ ಬ್ರಹ್ಮನ ಮೊರೆಯಿತ್ತರಂತೆ. ಆತ ಎಲ್ಲರನ್ನೂ ಕರೆದುಕೊಂಡು ಶಿವನ ಬಳಿ ಬಂದು ಸಕಲರ ರಕ್ಷಣೆ ಮಾಡೆಂದು ಬೇಡಿಕೊಂಡರಂತೆ. ಆಗ ಮೊರೆಯಿತ್ತವರ ಕರೆಗೆ ಓಗೊಟ್ಟ ಶಿವ. "ನನ್ನ ಲಿಂಗದ ಶಾಖವನ್ನು ಸಹಿಸುವ ಸಾಮರ್ಥ್ಯ ಕೇವಲ ಪಾರ್ವತಿಗೆ ಮಾತ್ರ ಇದೆ. ಆಕೆಯನ್ನೇ ಒಲಿಸಿಕೊಳ್ಳಿ" ಎಂದು ಹೇಳಿದಾಗ ಎಲ್ಲರೂ ಆ ಮಾತೆಯನ್ನು ಪೂಜಿಸಿ, ಒಲಿಸಿ ಸಂಪೂರ್ಣ ಸೃಷ್ಟಿಯ ರಕ್ಷಣೆಯನ್ನು ಮಾಡೆಂದು ಬೇಡಿಕೊಂಡರು.

ಭಕ್ತರ ಮೊರೆಯನ್ನಾಲಿಸಿ ಶಿವೆಯು ಯೋನಿಯ ರೂಪದಲ್ಲಿ ಶಿವಲಿಂಗವನ್ನು ಧರಿಸಿದಳು. ಹಾಗಾಗಿಯೇ ಪಾರ್ವತಿಯನ್ನು ಜಗಜ್ಜನನಿ ಎಂದು ಕರೆಯುತ್ತಾರೆ. ಭೂಲೋಕದಲ್ಲಿ ಮೊಟ್ಟಮೊದಲ ಬಾರಿಗೆ ದಾರುಕಾವನದಲ್ಲಿ ಶಿವಲಿಂಗ ಪತನಹೊಂದಿದರೂ ಸ್ವಯಂಭೂವಾಗಿ ಮತ್ತೆ ಜ್ಯೋತಿರೂಪದಲ್ಲಿ ಪ್ರಕಟವಾದ ಕಾರಣ ಈ ಲಿಂಗವನ್ನು 'ಜ್ಯೋತಿರ್ಲಿಂಗ' ಎಂದು ಕರೆಯಲಾಯಿತು.

ಭೂಮಾತೆಯ ಮೇಲಿದ್ದ ಲಿಂಗದ ಭಾರವನ್ನು ಕಡಿಮೆ ಮಾಡಲು ಶ್ರೀಮನ್ನಾರಾಯಣ ಶಿವನಿಗೆ ಬಿನ್ನಹಿಸಿದ. ಆಗ ಶಿವ ಶ್ರೀಹರಿಗೆ ತನ್ನ ಲಿಂಗವನ್ನು ಸುದರ್ಶನ ಚಕ್ರದಿಂದ 12 ಭಾಗಗಳಾಗಿ ವಿಭಜಿಸಲು ಅನುಮತಿ ಕೊಟ್ಟ. ಲಿಂಗಗಳನ್ನು ವಿಭಜಿಸಿದಾಗ ಅವು ದೇಶದ ವಿವಿಧ ಭಾಗಗಳಲ್ಲಿ ಸಿಡಿದು ಬಿದ್ದವು. ಇವೇ ಮುಂದೆ 12 ಜೋತಿರ್ಲಿಂಗಗಳಾಗಿ ಈಗಲೂ ಭಕ್ತಿಯಿಂದ ಪೂಜಿಸಲ್ಪಡುತ್ತಿವೆ. ದಾರುಕಾವನದಲ್ಲಿ ನೂರಾರು ಶಿವಲಿಂಗಗಳ ದೇವಾಲಯಗಳಿವೆ. ಇವೆಲ್ಲವನ್ನೂ ಪೂಜಿಸಿ, ಜಾಗೇಶ್ವರನನ್ನು ಸ್ಮರಿಸಿದರೇ ಸಾಕು, ನಿಮ್ಮೆಲ್ಲಾ ಇಚ್ಛೆಗಳು ಖಂಡಿತ ಈಡೇರುತ್ತವೆಯಂತೆ.

ಈ ದೇವಾಲಯಗಳ ರಚನೆ ನಮ್ಮ ದಕ್ಷಿಣದ ದೇವಾಲಯಗಳನ್ನು ಹೋಲುತ್ತದೆ. ಇದರ ಬಗ್ಗೆ ಕೇಳಿದಾಗ ಭಟ್ಟರು, ಈ ದೇವಾಲಯಗಳ ನಿರ್ಮಾಣವನ್ನು ಎಲ್ಲಕ್ಕೂ ಮೊದಲು ಯಾರು ಮಾಡಿದರು ಅನ್ನೋದು ಇನ್ನೂವರೆಗೆ ತಿಳಿದು ಬಂದಿಲ್ಲ. ಆದರೆ ಈ ದೇಗುಲಗಳ ಜೀರ್ಣೋದ್ಧಾರವನ್ನು ಮಾತ್ರ ಅನೇಕ ರಾಜವಂಶಜರು ಮಾಡಿದ್ದಾರಂತೆ.

ಇಲ್ಲಿ ಸುಮಾರು ಎಂಟನೇ ಶತಮಾನದಿಂದ 13ನೆಯ ಶತಮಾನದ ಮಧ್ಯದಲ್ಲಿ 125 ಚಿಕ್ಕ ಹಾಗೂ ದೊಡ್ಡದಾದ ದೇವಾಲಯಗಳನ್ನು ಕಟ್ಟಲಾಗಿತ್ತು ಎಂದು ಅಂದಾಜು ಮಾಡಲಾಗಿದೆ. ಬಹುಷಃ ಇವುಗಳ ನಿರ್ಮಾಣವನ್ನು ಕಥೂರಿ ಚಂದ್ರವಂಶದ ರಾಜರು ಮಾಡಿರಲೂ ಬಹುದು ಎನ್ನುತ್ತಾರೆ. ಆ ಸಮಯದಲ್ಲಿ ಈ ದೇವಾಲಯವು ಕಟ್ಟಿಗೆಯಿಂದ ನಿರ್ಮಿಸಲಾಗಿತ್ತಂತೆ. ಹಾಗಾಗಿ ಕೆಲ ವರ್ಷಗಳ ಬಳಿಕ ಇದರ ಜೀರ್ಣೋದ್ಧಾರವನ್ನು ಮಾಡಲಾಯಿತು. ಚಂದ್ರವಂಶದ ರಾಜರು ದೇವಾಲಯದ ವ್ಯವಸ್ಥಾಪನೆಗಾಗಿ 125 ಹಳ್ಳಿಗಳನ್ನು ದೇವಾಲಯದ ಹೆಸರಿನಲ್ಲಿ ಉಂಬಳಿ ಹಾಕಿ ಕೊಟ್ಟಿದ್ದರಂತೆ.

ಜಾಗೇಶ್ವರ ಜೋತಿರ್ಲಿಂಗವು ಸ್ವಯಂಭೂ ಅಷ್ಟೆ ಆಗಿರದೆ ಮತ್ತೊಂದು ವಿಶೇಷತೆಯನ್ನು ಹೊಂದಿದೆ. ಈ ಲಿಂಗವನ್ನು ಎರಡು ಭಾಗದಲ್ಲಿ ಕಾಣಬಹುದು. ದೊಡ್ಡ ಭಾಗವನ್ನು ಶಿವನೆಂದೂ, ಚಿಕ್ಕ ಭಾಗವನ್ನು ಆದಿಶಕ್ತಿಯದೆಂದೂ ಹೇಳುತ್ತಾರೆ. ಈ ಲಿಂಗವು ಅರ್ಧ ನಾರೀಶ್ವರನ ರೂಪದಲ್ಲಿದೆ. ಇದಕ್ಕೆ ಸಾಕ್ಷಿಯೆಂತೆ ದೇವಾಲಯದ ಹಿಂಭಾಗದಲ್ಲಿ ದೇವದಾರು ವೃಕ್ಷದಿಂದ ಎರಡು ಟೊಂಗೆಗಳು ಆಕಾಶದೆತ್ತರಕ್ಕೆ ಬೆಳೆದಿವೆ. ಶಿವಶಕ್ತಿಯ ಈ ವೃಕ್ಷಕ್ಕೆ ಪ್ರದಕ್ಷಿಣೆ ಹಾಕಿದರೆ ಅಖಂಡ ಸೌಭಾಗ್ಯ ನಮ್ಮದಾಗುತ್ತದೆ ಅಂತೆ. ನಾನು ಮತ್ತು ವಂದನಾ ಆ ವೃಕ್ಷಕ್ಕೆ ಭಕ್ತಿಯಿಂದ ಪ್ರದಕ್ಷಿಣೆ ಹಾಕಿದೆವು. ಈ ರೀತಿ ಇಬ್ಭಾಗವಾಗಿ ಬೆಳೆದ ದೇವದಾರು ವೃಕ್ಷ ಬೇರೆಲ್ಲೂ ಕಾಣಲು ಸಿಗುವುದಿಲ್ಲ.

125 ದೇವಾಲಯಗಳಲ್ಲಿ 108 ಶಿವಾಲಯಗಳಿವೆ. ಶಿವನಿಗೆ 1008 ಹೆಸರುಗಳಿದ್ದರೂ ಕೇವಲ 108 ಹೆಸರುಗಳ ನಾಮಸ್ಮರಣೆಯನ್ನು ಮಾಡಲಾಗುತ್ತದೆ. ಈ 108 ಶಿವಾಲಯಗಳು ಶಿವನ ಈ ನಾಮಗಳಿಗೆ

ಸಮರ್ಪಿತವಾಗಿವೆ. ಭಾರತೀಯ ಪುರಾತತ್ವ ಇಲಾಖೆಯಿಂದ ಇಲ್ಲಿನ 125 ದೇವಾಲಯಗಳಲ್ಲಿ ದಂಡೇಶ್ವರ ದೇವಾಲಯ, ಚಂಡಿಕಾ ಮಾತಾ ದೇವಾಲಯ, ಜಾಗೇಶ್ವರ, ಕುಬೇರ, ಮೃತ್ಯುಂಜಯ ದೇವಾಲಯ, ನಂದಾದೇವಿ ಅಥವಾ ನವದುರ್ಗೆಯ ದೇವಾಲಯ, ನವಗ್ರಹ ಅಥವಾ ಪಿರಾಮಿಡಲ್ ಶ್ರೈನ್ ಹಾಗೂ ಸೂರ್ಯ ದೇವಾಲಯಗಳನ್ನು ಸಂರಕ್ಷಿಸಲ್ಪಟ್ಟಿವೆ.



**ಮೃತ್ಯುಂಜಯ ದೇವಾಲಯ**

ಜಾಗೇಶ್ವರನ ದರ್ಶನ ನಂತರ ಪಕ್ಕದಲ್ಲಿದ್ದ ಮಹಾ ಮೃತ್ಯುಂಜಯನ ದೇವಾಲಯಕ್ಕೆ ಹೋಗಿ ಆತನ ದರ್ಶನ ಮಾಡಿದೆವು. ಅಲ್ಲಿದ್ದ ಬೃಹದಾಕಾರದ ಶಿವಲಿಂಗದ ಮುಂದೆ ಆದಿ ಶಂಕರಾಚಾರ್ಯರು ರಚಿಸಿದ 'ತ್ರಯಂಬಕಮ್ ಯಜಾಮಹೇ ಸುಗಂಧೀಂ ಪುಷ್ಟಿವರ್ಧನಂ ಊರ್ವಾರ್ವಕಮೀವ ಬಂಧಂ ಮೃತ್ಯೋರ್ ಮೋಕ್ಷಂ ಅಮೃತಃ.' ಎಂದು ಮಂತ್ರೋಚ್ಚಾರ ಮಾಡಿ ಬಳಿಕ ಆರತಿ ಎತ್ತಿದಾಗ ಆದ ಆನಂದ ವರ್ಣನಾತೀತ.

ಸಮಸ್ತ ದೇವರಲ್ಲಿ ಕೇವಲ ಶಿವನೊಬ್ಬನೇ ಮೃತ್ಯುವನ್ನು ಗೆದ್ದಿರುವ ಕಾರಣ ಆತನಿಗೆ ಮೃತ್ಯುಂಜಯ ಎಂದು ಕರೆಯುತ್ತಾರೆ. ಮೃತ್ಯುಂಜಯ ಮೃತ್ಯುವನ್ನು ಗೆದ್ದು ಜೀವನ ಕೊಡುವ ದೇವ. ಅನೇಕರು ಅವನ ಜಪವನ್ನು ಮಾಡಿ, ಫಲವನ್ನು ಪಡೆದಂತಹ ಉದಾಹರಣೆಗಳನ್ನು ನಾನು ಕಂಡಿದ್ದೇನೆ. ಭಾರತೀಯ ಪುರಾತತ್ವದ ಸಮೀಕ್ಷೆಯ ಅನುಸಾರ ಮೃತ್ಯುಂಜಯ ದೇವಾಲಯವನ್ನು ಎಂಟನೆಯ ಶತಮಾನದ ಉತ್ತರಾರ್ಧದಲ್ಲಿ ನಾಗರ ಶೈಲಿಯ ರೇಖಾ ಶಿಖರದ ಪದ್ಧತಿಯಲ್ಲಿ ನಿರ್ಮಿಸಲಾಗಿದೆ. ಎಂಟನೆ ಶತಮಾನದ ಆರಂಭದಲ್ಲಿ ಆದಿ ಗುರು ಶ್ರೀ ಶಂಕರಾಚಾರ್ಯರು ಇಲ್ಲಿಗೆ ಬಂದಾಗ ಅವರೊಂದಿಗೆ ದಕ್ಷಿಣ ಭಾರತದಿಂದ ಅವರ ಶಿಷ್ಯರಲ್ಲಿ ಒಬ್ಬನಾದ ಬ್ರಾಹ್ಮಣರ ಹುಡುಗ ಕುಮಾರ ಸ್ವಾಮಿ ಎಂಬಾತ ಬಂದಿದ್ದನಂತೆ. ಆಗ ಶಂಕರಾಚಾರ್ಯರು ಜಾಗೇಶ್ವರನ ಅರ್ಚನೆಯ ಜವಾಬ್ದಾರಿಯನ್ನು ಆತನಿಗೆ ವಹಿಸಿಕೊಟ್ಟರಂತೆ. ಆತ ಮುಂದೆ ಅಲ್ಲಿಯ ಹುಡುಗಿಯೊಂದಿಗೆ ವಿವಾಹ ಮಾಡಿಕೊಂಡು ಪ್ರಧಾನ ಪೂಜಾರಿಯಾದ. ಇನ್ನೂವರೆಗೂ ಇವರದ್ದೇ ಸಂತತಿಯಿಂದ ದೇವರ ಪೂಜೆ ಪುನಸ್ಕಾರ ಮಾಡುತ್ತಿದ್ದಾರೆ.

**ಪುಷ್ಟಿಮಾತಾ ದೇವಾಲಯ**

ಆದಿ ಶಕ್ತಿಯ 52 ಶಕ್ತಿಪೀಠಗಳಲ್ಲಿ ಇದೂ ಒಂದು. ಇಲ್ಲಿ ಮಾತೆಯ ಕಾಲುಂಗುರ ಹೊಂದಿದ ಬೆರಳು ಬಿದ್ದಿತ್ತಂತೆ. ಪುರಾಣದ ಪ್ರಕಾರ ಈ ಮಾತೆಯ ವಿಗ್ರಹ ದಿನಕ್ಕೆ ಮೂರು ಬಾರಿ ರೂಪವನ್ನು ಬದಲಾಯಿಸುತ್ತದಂತೆ. ತಾಯಿಯ ಪೂಜೆ ಮಾಡುವಾಗ ಭಟ್ಟರು ತಮ್ಮ ಕಣ್ಣಿಗೆ ಬಟ್ಟೆಯನ್ನು ಕಟ್ಟಿ ಸ್ನಾನ, ವಸ್ತ್ರಾಲಂಕಾರ, ಅರ್ಚನೆಗಳನ್ನು ಮಾಡುತ್ತಾರಂತೆ. ಪುಷ್ಟಿ ಮಾತೆ ಬೇಡಿದವರಿಗೆ ತಕ್ಷಣ ಫಲ ನೀಡುವ ತಾಯಿ. ಅವಳ ಕುಂಕುಮ ಹಾಗೂ ಬಳೆಗಳನ್ನು ಪ್ರಸಾದದ ರೂಪದಲ್ಲಿ ಪಡೆದು ಜಗಜ್ಜನನಿಗೆ ವಂದಿಸಿ ಮುನ್ನಡೆದೆವು.

**ದಕ್ಷಿಣಾಭಿಮುಖೀ ಆಂಜನೇಯ ದೇವಾಲಯ**

ದಕ್ಷಿಣಾಭಿಮುಖೀ ಆಂಜನೇಯ ದೇವಾಲಯ ಸಾಮಾನ್ಯವಾಗಿ ಎಲ್ಲೆಡೆಗೂ ನೋಡೋಕೆ ಸಿಗೋದಿಲ್ಲ. ಇಲ್ಲಿ ಹನುಮಾನ್ ಚಾಲೀಸಾದ ಪಠಣೆ ಮಾಡಿದಲ್ಲಿ ವಿದಾಬುದ್ಧಿಯ ಜೊತೆಗೆ ಶಕ್ತಿಯನ್ನೂ ಪಡೆಯಬಹುದು. ಶನಿದೆಸೆ ದೂರವಾಗುತ್ತಂತೆ.

**ಲವಕುಶರ ಯಜ್ಞಕುಂಡ ಮತ್ತು ಕಮಲದ ಹೊಂಡ**

ಶ್ರೀರಾಮನ ಮಕ್ಕಳಾದ ಲವ ಮತ್ತು ಕುಶರು ಇಲ್ಲಿ ಬಂದು 'ನಿಮಿತ್ತ ಯಜ್ಞವನ್ನು' ಮಾಡಿದ್ದರಂತೆ. ಅಲ್ಲಿನ ಕಮಲದ ಹೊಂಡದಲ್ಲಿ ಈಗಲೂ ಸುಂದರ ಕಮಲಗಳು ಅರಳಿ ನಿಂತಿದ್ದನ್ನು ನೋಡಿ ನಮ್ಮ ಪ್ರಾಚೀನ ಕಥೆಗಳ ಬಗ್ಗೆ ಇನ್ನಷ್ಟು ಆಸಕ್ತಿ ಹೆಚ್ಚಿತು.

**ಸೋಮರಸ ಪಾತ್ರೆ**

ಇಲ್ಲಿ ದೊಡ್ಡದಾದ ಕಲ್ಲಿನ ಸೋಮರಸ ಪಾತ್ರೆಯನ್ನು ನೋಡಿದೆವು. ಪುರಾತನ ಕಾಲದಲ್ಲಿ ಮಹಾದೇವನಿಗೆ ಸೋಮರಸದ ನೈವೇದ್ಯ ಮಾಡಲಾಗುತ್ತಿತ್ತು ಎಂದು ನಿತೀನ್ ಹೇಳಿದ. ಅರ್ಜುನ ಇಲ್ಲಿ ಬಂದು ಜಾಗೇಶ್ವರನ ಪೂಜೆ ಮಾಡಿದ್ದರ ಬಗ್ಗೆ ಬ್ರಾಹ್ಮೀ ಲಿಪಿಯಲ್ಲಿ ಕಲ್ಲಿನ ಫಲಕದ ಮೇಲೆ ಉಲ್ಲೇಖಿಸಲಾಗಿದೆ. ಇದು ಸಧ್ಯಕ್ಕೆ ದೆಹಲಿಯಲ್ಲಿನ ಪುರಾತತ್ವ ಇಲಾಖೆಯ



ಸಂಗ್ರಹಾಲಯದಲ್ಲಿದೆ.

ದೇವಾಲಯದ ಸುತ್ತಮುತ್ತ ನಮಗೂ ಕೆಲವೊಂದು ಬರಹಗಳಿಂದ ತುಂಬಿದ ಶಿಲಾಲೇಖನಗಳನ್ನು ನೋಡಲು ದೊರೆತವು. ಆದರೆ ಅವುಗಳು ಯಾವ ಭಾಷೆಯಲ್ಲಿ, ಯಾರು ಬರೆದಿದ್ದಾರೆಂದು ಇನ್ನೂವರೆಗೂ ತಿಳಿದು ಬಂದಿಲ್ಲ. ಪ್ರತಿಯೊಂದನ್ನೂ ನೋಡುವಾಗ, ಅವುಗಳ ಬಗ್ಗೆ ಕೇಳುವಾಗ ಸಮಯ ತುಂಬಾ ಕಡಿಮೆ ಅನಿಸತೊಡಗಿತ್ತು. ಪ್ರತಿಯೊಂದರ ಫೋಟೋ ತೆಗೆಯುತ್ತಿದ್ದ ನನಗೆ ಅಲ್ಲಿದ್ದ 125 ದೇವಸ್ಥಾನಗಳನ್ನು ನೋಡುವ ಮನಸಿದ್ದರೂ ಉಳಿದವರಿಗೆ ಇದರಲ್ಲಿ ಅಷ್ಟೊಂದು ಆಸಕ್ತಿ ಇರದ ಕಾರಣ 'ಹೋಗೋಣ ಬನ್ನಿ' ಅಂದಾಗ ಹೊರಡಲೇ ಬೇಕಾಯ್ತು. ನನ್ನ ಮುಖ ನೋಡಿದ ಮಗರಾಯ 'ಮತ್ತೆ ಬರೋಣಮ್ಮಾ, ಆಗ ಎಲ್ಲೆಡೆಗೂ ಸುತ್ತಾಡೋಣ' ಅಂತ ಹೇಳಿದಾಗ ಗತ್ಯಂತರವಿಲ್ಲದೆ ಗಾಡಿಯಲ್ಲಿ ಕುಳಿತೆ.

ಅಂದು ಅಲ್ಲೇ ತಂಗಿದೆವು. ರಾತ್ರಿ ಬೆಂಕಿಯ ಸುತ್ತಲೂ ಹಾಡುತ್ತ, ಕುಣಿಯುತ್ತ, ನಗೆಬುಗ್ಗೆಯಲ್ಲಿ ತೇಲಾಡಿದೆವು. ಮರುದಿನ ಬೆಳಿಗ್ಗೆ ಆರು ಗಂಟೆಗೆ ದೇವಭೂಮಿಯಿಂದ ಕರ್ಮಭೂಮಿಯೆಡೆಗೆ ಪ್ರಯಾಣ ಬೆಳೆಸಿದಾಗ ಆ ದೇವಾಲಯಗಳ ಸಮೂಹದಿಂದ ಶಿವಶಕ್ತಿಯರು ನಮ್ಮನ್ನು ಆಶೀರ್ವದಿಸಿದಂತೆ ಭಾಸವಾಯಿತು. ಅ

**ಸವಿತಾ ಇನಾಮದಾರ**

## ಓದುಗರ ಪತ್ರ

"ಮಾತನಾಡಲು ಜತೆಯು ಬೇಕು ;
ಪ್ರೀತಿ ಮಾಡಲು ಹೃದಯ ಬೇಕು ;
ಪಾಠ ಹೇಳಲು ಜ್ಞಾನ ಬೇಕು ;
ಉತ್ತಮ ಸಂಸ್ಕೃತಿಯನ್ನು ಬೆಳೆಸಲು ಪುಸ್ತಕವು ಬೇಕು;
ಅವುಗಳನ್ನು ಓದಲು ಓದುಗರು ಬೇಕು" – ಕವಿವಾಣಿ.

ಬಾನಾಡಿಯವರೇ, ಬಾನಡಿಯಲ್ಲಿ ಕುಳಿತು ಚಿಂತಿಸಿದ ಶಬ್ದಗಳನ್ನು ಜೋಡಿಸಿ ತಾವು ಬರೆಯುತ್ತಿರುವ ಬೆನ್ನುಡಿಗಳು ಅತ್ಯಂತ ಔಚಿತ್ಯ, ಸಮಯೋಚಿತ ಪೂರ್ಣವಾಗಿದೆ. ನಮ್ಮ ನಾಡು, ನಡೆ ನುಡಿಯ ಬಗ್ಗೆ ಹಕ್ಕಿ–ಪಕ್ಕಿಗಳಂತೆ ಹೆಕ್ಕಿ ಕಳಕಳಿಯಿಂದ ಚಿಕ್ಕ ಮತ್ತು ಚೊಕ್ಕವಾದ ನಿಮ್ಮ ನುಡಿ–ಬರಹ, ಪ್ರತಿ ಮಾಸವೂ ವಿವಿಧ ವಿಷಯಗಳನ್ನು ರೂಪಿಸುವ ತಮ್ಮ ಪ್ರಯತ್ನ ಓದುಗರ ಚೇತನವನ್ನು ಜಾಗೃತಗೊಳಿಸುತ್ತದೆ. ತಮ್ಮ ಕೊಡುಗೆ ಹೀಗೆಯೇ ಅಚ್ಚುಕಟ್ಟಾಗಿ ಮುಂದುವರಿಯಲಿ. ನಮ್ಮೆಲ್ಲರ "ಅಭಿಮತ"ಳು ಸುಂದರವಾಗಿ, ಶೋಭಾಯಮಾನವಾಗಿ ಅಲಂಕರಿಸಿಕೊಂಡು,




ಸರಳವಾಗಿ ಲವಲವಿಕೆಯಿಂದ ಪ್ರತಿಮಾಸವೂ ಬಂದು ಓದುಗರ ಮನತಣಿಸಿ ಮೆಚ್ಚುಗೆಗೆ ಪಾತ್ರಳಾಗಿದ್ದಾಳೆ. ಅವಳು ವಿಶ್ವದಾದ್ಯಂತ ಎಲ್ಲರ ವಿಶ್ವಾಸವನ್ನೂ, ವಿಶ್ವದಾದ್ಯಂತಗೆದ್ದು ಕೀರ್ತಿಯುತಳಾಗಳೆಂದು ಶುಭಕೋರುವ. ಅ


***ಡಾ. ಅಹಲ್ಯಾಚಿಂತಾಮಣಿ***

---

ದೆಹಲಿಯಲ್ಲಿ ನೆಲೆನಿಂತು ರಾಷ್ಟ್ರಕ್ಕಾಗಿ ಚುಕ್ಕಾಣಿ ಹಿಡಿದು ಕೇಂದ್ರ ಮಂತ್ರಿಗಳೆಂದು ಕರೆಸಿಕೊಂಡ ಚತುರ್ಮುಖಗಳನ್ನು ಮುಖಪುಟದಲ್ಲಿ ಕುಳ್ಳಿರಿಸಿ ನೀಡಿದ ಭವ್ಯ ಸ್ವಾಗತ ಸಂದೇಶಗಳಿಂದ ದೆಹಲಿ ಕನ್ನಡಿಗರ ಕರ್ತವ್ಯ ಪ್ರಜ್ಞೆಯನ್ನು ಕಣ್ಣಾರೆ ಕಂಡಂತಾಗಲು ಸಾಕ್ಷಿಯಾದುದು ಅಭಿಮತದ ಜೂನ್ ತಿಂಗಳ ಸಂಚಿಕೆ. ಉಳಿದವರು ಎತ್ತಕಡೆ ಹೋದರೆಂದು ಅತ್ತಿತ್ತ ನೋಡುವಷ್ಟರಲ್ಲಿ ಪಕ್ಷ ಪಂಗಡ ವ್ಯತ್ಯಾಸಗಳಿಲ್ಲದೆ ಒಕ್ಕೊರಳಿನಿಂದ ನಾವೆಲ್ಲರು ಒಳಗಡೆ ಕುಳಿತಿದ್ದೇವೆ. ಬನ್ರಿ ಈ ಕಡೆಗೆ, ಎಂದು ಕರೆ ಬಂದಾಗಲೆ ಅರಿವಾದುದು ಕರ್ನಾಟಕದ ಪೂರ್ತಿ ಪ್ರತಿನಿಧಿಗಳ ದರ್ಶನ ಇಲ್ಲಿ ಆಗಲಿದೆ ಎಂಬ ಸಂತಸದ ವಿಚಾರ. ದೆಹಲಿ ಕರ್ನಾಟಕದವರ ಈ ಸಮನ್ವತಾ ಭಾವ ಎಂದೆಂದಿಗೂ ಇದೇ ರೀತಿ ಮುಂದುವರಿಯುತ್ತಿರಲಿ ಎಂಬ ಶುಭಾಶಂಸೆಗಳೊಂದಿಗೆ ತುಂಬು ಹೃದಯದ ಅಭಿನಂದನೆಗಳು. ಅ

***ಕೀರಿಕ್ಕಾಡು ವನಮಾಲಾ ಕೇಶವ ಭಟ್ಟ***
***ಕಾಸರಗೋಡು***

## ನೂತನ ರಾಜ್ಯಸಭಾ ಸದಸ್ಯರು



ಡಾ. ಪ್ರಭಾಕರ ಕೋರೆ ಅವರು ಇತ್ತೀಚೆಗೆ ಕರ್ನಾಟಕದಿಂದ ರಾಜ್ಯಸಭೆಗೆ ಆಯ್ಕೆಯಾದರು.



ಶ್ರೀ ಡಿ. ಕುಪೇಂದ್ರ ರೆಡ್ಡಿ ಅವರು ಕರ್ನಾಟಕದಿಂದ ರಾಜ್ಯಸಭೆಗೆ ಆಯ್ಕೆಯಾದರು.

---

### ಮಿಸ್ ಟೀನ್ ಸ್ಪರ್ಧೆಯ ಮುಂಚೂಣಿಯಲ್ಲಿ
## ಅಮಿತಾ ದೇವ್



ಅಲೀ ಕ್ಲಬ್ ನಡೆಸುತ್ತಿರುವ ಮಿಸ್ಟರ್ ಮತ್ತು ಮಿಸ್ ಟೀನ್ ಇಂಡಿಯಾ ಸ್ಪರ್ಧೆಯಲ್ಲಿ ದೆಹಲಿಯ ಆರ್.ಕೆ. ಪುರಂನ ಕುಮಾರಿ ಅಮಿತಾ ದೇವ್ ಅವರು ಅಂತಿಮ ಹಂತದ ಹತ್ತು ಸ್ಪರ್ಧಿಗಳಲ್ಲಿ ಒಬ್ಬರಾಗಿದ್ದಾರೆ. ಅವರು ಮಿಸ್ ಇಂಡಿಯಾ ಸ್ಪರ್ಧೆಯಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ. ಈ ಸ್ಪರ್ಧೆಯು ಝೀ ನ್ಯೂಸ್ ಚಾನೆಲ್‌ನಲ್ಲಿ ಇದೇ ಆಗಸ್ಟ್ 15ರ ಸಂಜೆ ಪ್ರಸಾರವಾಗಲಿದೆ.

ಕುಮಾರಿ ಅಮಿತಾ ದೇವ್ ಅವರು ಗಡಿಭದ್ರತಾ ಪಡೆಯಲ್ಲಿ ಸೇವೆ ಸಲ್ಲಿಸುತ್ತಿರುವ ಶ್ರೀ ದೇವೇಂದ್ರ ಹಾಗೂ ಶ್ರೀಮತಿ ಆಶಾ ದೇವ್ ಅವರ ಪುತ್ರಿಯಾಗಿದ್ದಾರೆ.

ಶ್ರೀ ದೇವೇಂದ್ರ ಅವರು ಮೂಲತಃ ಶಿವಮೊಗ್ಗದವರಾಗಿದ್ದು ದೆಹಲಿಯಲ್ಲಿ ಕಳೆದ ನಾಲ್ಕು ವರ್ಷಗಳಿಂದ ವಾಸವಾಗಿದ್ದು ದೆಹಲಿ ಕರ್ನಾಟಕ ಸಂಘದ ಸಕ್ರಿಯ ಸದಸ್ಯರಾಗಿದ್ದಾರೆ.

ಆರ್.ಕೆ. ಪುರಂನ ಸೆಕ್ಟರ್ 2ರ ಕೇಂದ್ರಿಯ ವಿದ್ಯಾಲಯದಲ್ಲಿ 11ನೇ ತರಗತಿಯಲ್ಲಿ ಓದುತ್ತಿರುವ ಅಮಿತಾ ದೇವ್ ನೃತ್ಯ ಮತ್ತು ಮಾಡೆಲಿಂಗ್‌ಗಳಲ್ಲಿ ಹೆಚ್ಚಿನ ತರಬೇತಿಯನ್ನು ಪಡೆಯುತ್ತಿದ್ದಾರೆ.

ಮಿಸ್ ಟೀನ್ ಸ್ಪರ್ಧೆಯ ಅಂತಿಮ ಹಂತ ತಲುಪುವುದಕ್ಕಿಂತ ಮುಂಚೆ ಅಮಿತಾ ದೇವ್ ಅವರ ಆಡಿಸನ್ ದೆಹಲಿಯಲ್ಲಿ ನಡೆದಿತ್ತು. ಸುಮಾರು 5000 ಅರ್ಜಿಗಳಲ್ಲಿ ಅಮಿತಾ ದೇವ್ ಅವರು ಟಾಪ್ 10 ಹಂತಕ್ಕೆ ತಲುಪಿದ್ದು ಅವಳ ಪ್ರತಿಭೆಗೆ ಹಾಗೂ ಸಾಧನೆಗೆ ಸಿಕ್ಕ ಗೌರವವಾಗಿದೆ. ಅ

**SAUJANYA** PRINTING PRESS
A HOUSE OF QUALITY PRINTING

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ
ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್
ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು.
ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

C-95, Okhla Industrial Area Phase-I, New Delhi – 110 020

E-MAIL: saujanyapp2010@gmail.com / hpgp2006@gmail.com
PHONE: 011-40520770 MOBILE:9811104398,,9811604398

# ಕೆಂಪುಕೋಟೆಯ ಕಲ್ಲುಗಳು


ಅವರು ತಮ್ಮದೆಂದುಕೊಂಡ ಮನೆಗಳಿಂದ ದೂರ ಓಡಿ ಹೋಗಬೇಕೆಂದು ಹೊರಟಿದ್ದಾರೆ. ಮಕ್ಕಳು, ಒಂದೆರಡು ಬಟ್ಟೆಗಳು, ಕೈಯಲ್ಲಿ ಹಿಡಿಯಲಾಗುವಷ್ಟು ಇತರ ವಸ್ತುಗಳು. ಹೋಗುವುದು ಎಲ್ಲಿಗೆ ಎಂದು ಅವರಿಗಿನ್ನೂ ಗೊತ್ತಿಲ್ಲ. ಮರುಭೂಮಿಯ ಗುಪ್ತವಾದ ಸುರಂಗಗಳಿಂದ ಹೊರಟವರಿಂದ ಎಸೆದ ಮದ್ದುಗುಂಡುಗಳ ಶಬ್ದ ಮತ್ತು ಅವು ಕಾರಿದ ಕಿಡಿ ಮತ್ತು ಹೊಗೆಗಳು ಹೊರಟ ದಾರಿಯನ್ನು ಮಾತ್ರವಲ್ಲ ಹೊರಟು ಹೋಗಬೇಕೆಂಬ ಆಲೋಚನೆಯನ್ನೇ ಮುಚ್ಚಿಸುವಂತಿವೆ. ಹೋರಾಟಗಾರರು ತಮ್ಮ ಯುದ್ಧದ ಆಯುಧಗಳೊಂದಿಗೆ ಮುನ್ನಡೆಯುತ್ತಿದ್ದಾರೆ. ಎದುರಿಗೆ ಸಿಕ್ಕ ಹಸುಲೆಯರ ಶಾಲೆಗಳು, ಮುಗ್ದರ ಮನೆಗಳು, ಆಸ್ಪತ್ರೆಗಳು ಆಹುತಿಯಾಗುತ್ತಿವೆ. ದೂರಗಾಮಿ ಕ್ಷಿಪಣಿಗಳಿಂದ ಹೊರಟ ಗುಂಡಿನ ಮಳೆಯ ಆರ್ಭಟಕ್ಕೆ ಅಲ್ಲಿರುವ ಜೀವಗಳು ಸದ್ದಿಲ್ಲದಂತಾಗುತ್ತಿವೆ. ಇದು ಮಧ್ಯ ಪೂರ್ವ ಏಶ್ಯಾದ ಚಿತ್ರಣ.

ಆಗಸ್ಟ್ ಹದಿನೈದರ ಮುಂಜಾನೆ ದೆಹಲಿಯ ಕೆಂಪುಕೋಟೆಯ ಮೇಲೆ ನಮ್ಮ ದೇಶದ ಪ್ರಧಾನ ಮಂತ್ರಿಯವರು ತ್ರಿವರ್ಣವನ್ನು ಹಾರಾಡಿಸುವಾಗ ನಮ್ಮೊಳಗೆ ಚಿಮ್ಮುವ ದೇಶಪ್ರೇಮದ ಚಿಲುಮೆಗಳು ನಮ್ಮ ಇಂದಿನ ಮತ್ತು ಮುಂದಿನ ಬದುಕುಗಳ ಹೊಸ ಕನಸುಗಳನ್ನು ಸಾಕ್ಷಾತ್ಕರಿಸುತ್ತವೆ. ಅರುವತ್ತೇಳು ವರ್ಷಗಳ ಹಿಂದೆ ನಾವು ಪಡೆದ ಅಮೂಲ್ಯವಾದ ಸ್ವಾತಂತ್ರ್ಯವನ್ನು ಅನುಭವಿಸಿರುವ ನಮಗೆ ದಿಕ್ಕಿಲ್ಲದೇ ಓಡುವಂತಹ ಸಂದರ್ಭಗಳು ಬರಲಾರವು. ನಮ್ಮ ಹಿಂದಿನ ತಲೆಮಾರಿನವರು ಕಟ್ಟಿದ ಪ್ರಜಾಸತ್ತೆಯ ಗಟ್ಟಿಕಲ್ಲುಗಳು ಕೆಂಪುಕೋಟೆಯನ್ನು ಇನ್ನಷ್ಟು ಸುದೃಢಗೊಳಿಸಬಲ್ಲುದೇ ಹೊರತು ನಮ್ಮೊಳಗಿನ ನಂಬಿಕೆಗಳನ್ನು ಅಲ್ಲಾಡಿಸದು. ದೇಶದ ಸ್ವಾತಂತ್ರ್ಯವನ್ನು ಉತ್ಸವವನ್ನಾಗಿ ಆಚರಿಸುವ ಈ ಸಂದರ್ಭ ವೈಯಕ್ತಿಕವಾಗಿ, ಸಾಮಾಜಿಕವಾಗಿ ಮತ್ತು ರಾಷ್ಟ್ರದ ಪ್ರಜೆಯಾಗಿ ನಮ್ಮ ಜವಾಬ್ದಾರಿಗಳನ್ನು ಮತ್ತೆ ನೆನಪಿಸುವ ಸಮಯವಾಗಿದೆ.

ಇತ್ತೀಚೆಗೆ ನಾಡಿನ ಗಡಿಯ ಕುರಿತು ವಿವಾದದ ಅಲೆಯೆದ್ದಾಗ ದೆಹಲಿ ಕರ್ನಾಟಕ ಸಂಘವು ದೇಶದ ನಾಯಕರಲ್ಲಿ ಅದರ ಶಮನಕ್ಕೆ ಕೇಳಿಕೊಂಡಿತ್ತು. ಭಾಷೆ, ಕಲೆ, ಸಂಸ್ಕೃತಿ, ಸಾಹಿತ್ಯಗಳನ್ನು ಉಳಿಸಿ ಬೆಳೆಸುವುದರ ಜತೆಗೆ ಜನಸಾಮಾನ್ಯರಲ್ಲಿ ಸಾಮಾಜಿಕ ಜವಾಬ್ದಾರಿಗಳನ್ನು ಹೆಚ್ಚಿಸುವಂತಹ ಪ್ರಕ್ರಿಯೆಗಳು ಆರಂಭವಾಗಿ ಭಾರತದೇಶವನ್ನು ಜಗತ್ತಿನ ಮೊದಲ ಶ್ರೇಣಿಯ ದೇಶವನ್ನಾಗಿಸುವಲ್ಲಿ ಸಂಘವು ಕೂಡಾ ತನ್ನ ಕೊಡುಗೆಯನ್ನು ನೀಡಬಹುದು.

ಅಭಿಮತದ ಓದುಗರಿಗೆ ಸ್ವಾತಂತ್ರ್ಯದ ಶುಭಾಶಯಗಳು! ಅ

*ಬಾಲಕೃಷ್ಣ ನಾಯ್ಕ್ ಡಿ.*



भारत इलेक्ट्रॉनिक्स लिमिटेड
**Bharat Electronics Limited**

भारत इलेक्ट्रॉनिक्स
BHARAT ELECTRONICS
QUALITY. TECHNOLOGY. INNOVATION.

# BEL Empowers the Nation's Defence Forces

OFFERS WIDE RANGE OF PRODUCTS & SYSTEMS


Military Communications


Radars



Weapon Systems


C4I Systems



Naval Systems


Electronic Warfare Systems


Avionics


Electro Optics


Mobile Communication


Coastal Surveillance System


Shelters

Bharat Electronics Ltd (BEL), India's leading defence electronics company, offers state-of-the-art products and systems that help the Indian armed forces safeguard the nation's frontiers. Established in 1954 to meet the specialised electronic needs of the Indian defence services, BEL, a multi-product, multi-technology, multi-Unit conglomerate, designs and manufactures a wide range of products in the areas of Military Communications, Radars, Weapon Systems, C4I Systems, Naval Systems, Electronic Warfare Systems, Avionics, Tank Electronics, Electro Optics, Mobile Communication, Coastal Surveillance System, Shelters, Telecom & Broadcasting and Professional Electronic Components.

Research and Development has been the core strength of BEL. The company maintains technological leadership with its strong in-house R&D and in association with DRDO labs, other national research and development agencies and academic institutes.

**Toll Free Number : 1800 425 0433**
**www.bel-india.com**

Delhi Karnataka Sangha Abhimatha Monthly,
Aug - 2014, Vol. No.24, Issue No.10, Price Rs.1/-  RNI Regn. No. 53405/91, DL-SW-1/4016/13-15
Printout Date : Aug 8th / 9th, Postal Date :10th  / 11th, Total Pages-20

# ಕನಾಟ್‌ಪ್ಲೇಸ್‌ನಲ್ಲಿ ಬೃಹತ್ ರಾಷ್ಟ್ರಧ್ವಜ

ರಾಷ್ಟ್ರ ರಾಜಧಾನಿ ದೆಹಲಿಯ ಕೇಂದ್ರಬಿಂದು ಕನಾಟ್‌ಪ್ಲೇಸ್‌ನತ್ತ ಸಾಗುತ್ತಿದ್ದಂತೆ ವಿಶಾಲವಾದ ಭಾರತದ ರಾಷ್ಟ್ರಧ್ವಜ ಹಾರಾಡುವುದನ್ನು ಗಮನಿಸದೇ ಇರಲಾಗುವುದಿಲ್ಲ. ರಾಜೀವ್ ಚೌಕ್ ಮೆಟ್ರೋ ಸ್ಟೇಷನ್‌ನಿಂದ ಹೊರಬಂದು  ಸೆಂಟ್ರಲ್ ಪಾರ್ಕ್‌ನತ್ತ ಸಾಗುತ್ತಿದ್ದಂತೆ ಆಗಸದತ್ತ ಕಣ್ಣು ಹಾಯಿಸಿದರೆ ಬೃಹತ್ ಧ್ವಜವನ್ನು ಕಾಣುವಿರಿ. ನ್ಯೂಡೆಲ್ಲಿ ಮುನ್ಸಿಪಲ್ ಕೌನ್ಸಿಲ್ ಮತ್ತು ಫ್ಲ್ಯಾಗ್ ಫೌಂಡೇಶನ್ ಆಫ್ ಇಂಡಿಯಾ ಜತೆಗೂಡಿ 207 ಅಡಿ ಎತ್ತರದ ಉಕ್ಕಿನ ಕಂಬದ ಮೇಲೆ 60 ಅಡಿ ಅಗಲ ಮತ್ತು 90 ಅಡಿ ಉದ್ದವಿರುವ ಈ .ಬಾವುಟವನ್ನು ಪ್ರತಿದಿನ ಹಾರಾಡಿಸುತ್ತವೆ. ಪೊಲಿಯೆಸ್ಟರ್ ಸಿಲ್ಕ್‌ನಿಂದ 35 ಕಿಲೋ ಭಾರದ ಈ ಬಾವುಟವನ್ನು ದೆಹಲಿಯ ಜಾಗೃತಿ ಎನ್‌ಕ್ಲೇವ್‌ನಲ್ಲಿ ಐದು ಮಂದಿ ಟೇಲರ್‌ಗಳು ಸೇರಿ ತಯಾರಿಸುತ್ತಾರೆ.

ಕಾಂಕ್ರಿಟ್ ಕಾಡಿನ ನಡುವೆಯೂ ದೂರದಿಂದಲೂ ಕಾಣುವ ಈ ಬಾವುಟ ದಿಲ್ಲಿಯಲ್ಲಿ ಒಂದು ಸ್ಮಾರಕವಾಗುತ್ತಿದೆ ಎನ್ನುತ್ತಾರೆ ಫ್ಲ್ಯಾಗ್ ಫೌಂಡೇಶನ್‌ನ ಮುಖ್ಯಸ್ಥ ಶ್ರೀ ಕೆ.ವಿ. ಸಿಂಗ್. ಕನಾಟ್‌ಪ್ಲೇಸ್‌ನ ಸುಂದರ ಕಟ್ಟಡಗಳ ನಡುವಿರುವ ಸುಂದರ ಪಾರ್ಕ್‌ನ ಮರಗಳೆಡೆಯಿಂದ ಆಕಾಶದೆತ್ತರದಲ್ಲಿ ಹಾರಾಡುವ ಕೇಸರಿ, ಬಿಳಿ ಮತ್ತು ಹಸಿರು ಬಣ್ಣದ ಭಾರತದ ರಾಷ್ಟ್ರಧ್ವಜವನ್ನು ನೋಡುವಾಗ ಪ್ರತಿ ಭಾರತೀಯನೂ ಹೆಮ್ಮೆಯಿಂದ ಎದೆ ತಟ್ಟಿಕೊಳ್ಳುತ್ತಾನೆ.

ಸ್ಥಳೀಯರಲ್ಲದೇ, ಹೊರ ಊರುಗಳಿಂದ ಬರುವ ಪ್ರವಾಸಿಗಳೂ ಈ ಬಾವುಟದ ಎದುರು ನಿಂತು ತಮ್ಮ ಮೊಬೈಲುಗಳಿಂದ ಸೆಲ್ಫೀ ಅಥವಾ ಫೋಟೋಗಳನ್ನು ಸೆರೆಹಿಡಿಯುವುದು ಇಲ್ಲಿ ಸಾಮಾನ್ಯ ದೃಶ್ಯ. ದೆಹಲಿ ಮೆಟ್ರೋ ರೈಲಿನ ಪ್ರಮುಖ ನಿಲ್ದಾಣವಾದ ರಾಜೀವ್ ಚೌಕ್‌ನ ಮೇಲಿರುವ ಈ ಪಾರ್ಕ್‌ನಲ್ಲಿ ಪ್ರತಿದಿನ ಸಾವಿರಾರು ಜನರು ವಿಹರಿಸಲು ಬರುತ್ತಾರೆ. ಪ್ರತಿಯೊಬ್ಬರೂ ತಮ್ಮ ಹೃದಯದಲ್ಲಿ ರಾಷ್ಟ್ರಪ್ರೇಮವನ್ನು ತುಂಬುತ್ತಾ ಮೊಬೈಲ್‌ಗಳಲ್ಲಿನ ಫೋಟೋಗಳನ್ನು ತಮ್ಮ ಗೆಳೆಯರಿಗೆ ಸಾಮಾಜಿಕ ತಾಣಗಳಲ್ಲಿ ಹಂಚುತ್ತಾರೆ. ಅ

***ಬಾಲಕೃಷ್ಣ ನಾಯ್ಕ್ ಡಿ.***



Editor: Balakrishna Naik D., Printed & Published by C.M. Nagaraja, General Secretary on behalf of Delhi Karnataka Sangha (R)
Rao Tularam Marg, Sector-12, R.K.Puram, New Delhi-110022, Tel: 26109615 and
Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770